ಶ್ರೀ ವೇದಾಂತ ಡಿಂಡಿಮ

1933

ವೇದಾಂತಡಿಂಡಿಮ

(ಭಾವಾರ್ಥದೊಡನೆ)

ಸಂಪಾದಕ:

ವೈ. ಸುಬ್ಬರಾವ್

೫ ಆಣೆ

ಅಧ್ಯಾತ್ಮಗ್ರಂಥಾವಳಿ

ಶ್ರೀಮನ್ನೃಸಿಂಹಸರಸ್ವತೀತೀರ್ಥರವರ

ವೇದಾಂತಡಿಂಡಿಮ

(ಭಾವಾರ್ಥದೊಡನೆ)

ಸಂಪಾದಕ:
ವೈ. ಸುಬ್ಬರಾವ್,
ಅಧ್ಯಾತ್ಮಪ್ರಕಾಶಕಾರ್ಯಾಲಯ.

ಕಾಪಿರೈಟ್, ೧ನೆಯ ಮುದ್ರಣ ೫೦೦ ಪ್ರತಿಗಳು

ಬೆಂಗಳೂರು ಸಿಟಿ:
ಅಧ್ಯಾತ್ಮಪ್ರಕಾಶಮುದ್ರಣಾಲಯ
೧೯೩೩

ಮುನ್ನುಡಿ

ಸುಪ್ರಸಿದ್ಧವಾಗಿರುವ ಈ ವೇದಾಂತಪ್ರಕರಣವನ್ನು ಯಾರು ಮಾಡಿರುವರೆಂಬುದು ಸಂಶಯಗ್ರಸ್ತವಾಗಿರುವದು. ಇದನ್ನು ಶ್ರೀಶಂಕರಾಚಾರ್ಯರವರೇ ರಚಿಸಿದರೆಂದು ಒಂದು ಅಚ್ಚಿನ ಪುಸ್ತಕದಲ್ಲಿದೆ. "ಭಗವತ್ಪಾದರಚಿತೋ ಭವಗ್ರಂಥಿವಿಭೇದನಃ। ದ್ವೈತಾದ್ರಿಶತಧಾರೋಽಯಂ ಜೀಯಾತ್ ವೇದಾನ್ತಡಿಣ್ಡಿಮಃ॥" ಎಂಬ ಶ್ಲೋಕವನ್ನು ಯಾರೋ ಆ ಪುಸ್ತಕದ ಆದಿಯಲ್ಲಿ ಸೇರಿಸಿರುತ್ತಾರೆ. ಆದರೆ ಇದು ಶ್ರೀಶಂಕರಭಗವತ್ಪಾದಕೃತವೆಂದು ಗೊತ್ತುಪಡಿಸುವದಕ್ಕೆ ಸರಿಯಾದ ಆಧಾರವು ಯಾವದೂ ಇಲ್ಲ. ಇದು ಶ್ರೀಮನ್ನೃಸಿಂಹಸರಸ್ವತೀತೀರ್ಥವಿರಚಿತವೆಂದು ಬೇರೆ ಕೆಲವು ಪುಸ್ತಕಗಳಲ್ಲಿದೆ. ಈ ನೃಸಿಂಹಸರಸ್ವತಿಗಳು ಯಾರೆಂಬುದೂ ಗೊತ್ತಾಗುವಂತಿಲ್ಲ.

ಇದುವರೆಗೆ ಅಚ್ಚಾಗಿದ್ದ ಪುಸ್ತಕಗಳಲ್ಲಿ ಬಹಳ ಅಶುದ್ಧಿಗಳಿದ್ದವು. ಇದನ್ನು ಆದಷ್ಟು ಶುದ್ಧಿಗೊಳಿಸಿ ಕನ್ನಡದ ಭಾವಾರ್ಥದೊಡನೆ ಈಗ ಹೊರಕ್ಕೆ ತಂದಿರುತ್ತೇನೆ. ಇದರ ವಿವರವನ್ನು ಬಹು ಸುಲಭವಾದ ಸಂಸ್ಕೃತವ್ಯಾಖ್ಯಾನದಿಂದೊಡಗೂಡಿಯೂ ಕನ್ನಡದ ವಿವರಣೆಯಿಂದೊಡಗೂಡಿಯೂ ಪ್ರಕಟಿಸಬೇಕೆಂಬ ಆಸೆಯುಂಟು ; ಸಂಸ್ಕೃತವ್ಯಾಖ್ಯಾನವು ಬರೆದು ಸಿದ್ಧವಾಗಿಯೇ ಇದೆ. ಹೊಸದಾಗಿ ವೇದಾಂತವನ್ನು ಓದುವವರಿಗೆ ವೇದಾಂತದ ಎಷ್ಟೋ ಪಾರಿಭಾಷಿಕಪದಗಳೂ ಪ್ರಕ್ರಿಯೆಗಳೂ ಇಲ್ಲಿ ಸಂಗ್ರಹವಾಗಿ ತಿಳಿವಳಿಕೆಗೆ ಬರುವಂತಿವೆ. ಇಲ್ಲಿ ವಿವೇಚನೆಮಾಡಿರುವ ಮುಖ್ಯವಿಷಯಗಳ ಸಂಗ್ರಹರೂಪವಾದ ಅನುಕ್ರಮಣಿಕೆಯೊಂದನ್ನು ಮೂಲಗ್ರಂಥದ ಕೊನೆಯಲ್ಲಿ ಸೇರಿಸಿರುತ್ತೇನೆ.

ಅಂಗಿರಸ, ಫಾಲ್ಗುನ
ಬಹುಳ ೧೧ }

ವೈ. ಸುಬ್ಬರಾವ್.

ಶ್ರೀ

ವೇದಾಂತಡಿಂಡಿಮಃ

ವೇದಾನ್ತಡಿಣ್ಡಿಮಾಸ್ತತ್ತ್ವ-
ಮೇಕಮುದ್ಘೋಷಯನ್ತಿ ಯತ್ ।
ಆಸ್ತಾಂ ಪುರಸ್ತಾತ್ತತ್ತೇಜೋ
ದಕ್ಷಿಣಾಮೂರ್ತಿಸಂಜ್ಞಿತಮ್ ॥ ೧ ॥

ಆತ್ಮಾನಾತ್ಮಪದಾರ್ಥೌ ದ್ವೌ
ಭೋಕ್ತೃಭೋಗ್ಯತ್ವಲಕ್ಷಣೌ ।
ಬಹ್ಮೈವಾತ್ಮಾ ನ ದೇಹಾದಿ-
ರಿತಿ ವೇದಾನ್ತಡಿಣ್ಡಿಮಃ ॥ ೨ ॥

ಜ್ಞಾತೃಜ್ಞೇಯಪದಾರ್ಥೌ ದ್ವೌ
ಭಾಸ್ಯಭಾಸಕಲಕ್ಷಣೌ ।
ಜ್ಞಾತಾ ಬ್ರಹ್ಮ ಜಗಜ್ಜ್ಞೇಯ-
ಮಿತಿ ವೇದಾನ್ತಡಿಣ್ಡಿಮಃ ॥ ೩ ॥

ಜ್ಞಾನಾಜ್ಞಾನಪದಾರ್ಥೌ ದ್ವಾ-
ವಾತ್ಮನೋ ಬನ್ಧಮುಕ್ತಿದೌ ।
ಜ್ಞಾನೆಂ ಮುಕ್ತಿರ್ನಿಬನ್ಧೋಽನ್ಯ-
ದಿತಿ ವೇದಾನ್ತಡಿಣ್ಡಿಮಃ ॥ ೪ ॥

ಸುಖದುಃಖಪದಾರ್ಥೌ ದ್ವೌ
ಪ್ರಿಯವಿಪ್ರಿಯಕಾರಕೌ ।
ಸುಖಂ ಬ್ರಹ್ಮ ಜಗದ್ದುಃಖ-
ಮಿತಿ ವೇದಾನ್ತಡಿಣ್ಡಿಮಃ ॥ ೫ ॥

ಸಮಷ್ಟಿವ್ಯಷ್ಟಿರೂಪೌ ದ್ವೌ
ಪದಾರ್ಥೌ ಸರ್ವಸಮ್ಮತೌ ।
ಸಮಷ್ಟಿರೀಶ್ವರೋ ವ್ಯಷ್ಟಿ-
ರ್ಜೀವೋ ವೇದಾನ್ತಡಿಣ್ಡಿಮಃ ॥ ೬ ॥

ಜ್ಞಾನಕರ್ಮಪದಾರ್ಥೌ ದ್ವೌ
ವಸ್ತುಕರ್ತ್ರಾತ್ಮತನ್ತ್ರಕೌ ।
ಜ್ಞಾನಾನ್ಮೋಕ್ಷೋ ನ ಕರ್ಮಭ್ಯ
ಇತಿ ವೇದಾನ್ತಡಿಣ್ಡಿಮಃ ॥ ೭ ॥

ಶ್ರೋತವ್ಯಾಶ್ರಾವ್ಯರೂಪೌ ದ್ವೌ
ಪದಾರ್ಥೌ ಸುಖದುಃಖದೌ ।
ಶ್ರೋತವ್ಯಂ ಬ್ರಹ್ಮ ನೈವಾನ್ಯ-
ದಿತಿ ವೇದಾನ್ತಡಿಣ್ಡಿಮಃ ॥ ೮ ॥

ಚಿನ್ತ್ಯಾಚಿನ್ತ್ಯಪದಾರ್ಥೌ ದ್ವೌ
ವಿಶ್ರಾನ್ತಿಶ್ರಾನ್ತಿದಾಯಕೌ ।
ಚಿನ್ತ್ಯಂ ಬ್ರಹ್ಮ ಪರಂ ನಾನ್ಯ-
ದಿತಿ ವೇದಾನ್ತಡಿಣ್ಡಿಮಃ ॥ ೯ ॥

ಧ್ಯೇಯಾಧ್ಯೇಯಪದಾರ್ಥೌ ದ್ವೌ
ಧೀಸಮಾಧ್ಯಸಮಾಧಿದೌ ।
ಧ್ಯಾತವ್ಯಂ ಬ್ರಹ್ಮ ನೈವಾನ್ಯ-
ದಿತಿ ವೇದಾನ್ತಡಿಣ್ಡಿಮಃ ॥ ೧೦ ॥

ಯೋಗಿನೋ ಭೋಗಿನೋ ವಾಪಿ
ತ್ಯಾಗಿನೋ ರಾಗಿಣೋಽಪಿ ಚ ।
ಜ್ಞಾನಾನ್ಮೋಕ್ಷೋ ನ ಸನ್ದೇಹ
ಇತಿ ವೇದಾನ್ತಡಿಣ್ಡಿಮಃ ॥ ೧೧ ॥

ನ ವರ್ಣಾಶ್ರಮಸಜ್ಕೇತೈ-
ರ್ನ ಕರ್ಮೋಪಾಸನಾದಿಭಿಃ ।
ಬ್ರಹ್ಮಜ್ಞಾನಂ ವಿನಾ ಮೋಕ್ಷ
ಇತಿ ವೇದಾನ್ತಡಿಣ್ಡಿಮಃ ॥ ೧೨ ॥

ಅಸತ್ಯಃ ಸರ್ವಸಂಸಾರೋ
ರಸಾಭಾಸಾದಿದೂಷಿತಃ ।
ಉಪೇಕ್ಷ್ಯೋಽಬ್ರಹ್ಮವಿಜ್ಞೇಯ-
ಮಿತಿ ವೇದಾನ್ತಡಿಣ್ಡಿಮಃ ॥ ೧೩ ॥

ವೃಥಾಕ್ರಿಯಾ ವೃಥಾಲಾಪಾನ್
ವೃಥಾವಾದಾನ್ ಮನೋರಥಾನ್ ।
ತ್ಯಕ್ತ್ವೈಕಂ ಬ್ರಹ್ಮ ವಿಜ್ಞೇಯ-
ಮಿತಿ ವೇದಾನ್ತಡಿಣ್ಡಿಮಃ ॥ ೧೪ ॥

ಸ್ಥಿತೋ ಬ್ರಹ್ಮಾತ್ಮನಾ ಜೀವೋ
ಬ್ರಹ್ಮ ಜೀವಾತ್ಮನಾ ಸ್ಥಿತಮ್ ।
ಇತಿ ಸಂಪಶ್ಯತಾಂ ಮುಕ್ತಿ-
ರಿತಿ ವೇದಾನ್ತಡಿಣ್ಡಿಮಃ ॥ ೧೫ ॥

ಜೀವೋ ಬ್ರಹ್ಮಾತ್ಮನಾ ಜ್ಞೇಯೋ
ಜ್ಞೇಯಂ ಜೀವಾತ್ಮನಾ ಪರಮ್ ।
ಮುಕ್ತಿಸ್ತದೈಕ್ಯವಿಜ್ಞಾನಾ-
ದಿತಿ ವೇದಾನ್ತಡಿಣ್ಡಿಮಃ ॥ ೧೬ ॥

ಸರ್ವಾತ್ಮತ್ವಾತ್ಪರಂ ಬ್ರಹ್ಮ
ಶ್ರೋತುರಾತ್ಮತಯಾ ಸ್ಥಿತಮ್ ।
ನಾಯಾಸಸ್ತತ್ತ್ವವಿಜ್ಞಪ್ತಾ-
ವಿತಿ ವೇದಾನ್ತಡಿಣ್ಡಿಮಃ ॥ ೧೭ ॥

ಐಹಿಕಂ ಚಾಮುಷ್ಮಿಕಂ ಚ
ತಾಪಾನ್ತಂ ಕರ್ಮಸಞ್ಚಯಮ್ ।
ತ್ಯಕ್ತ್ವಾ ಬ್ರಹ್ಮೈವ ವಿಜ್ಞೇಯ-
ಮಿತಿ ವೇದಾನ್ತಡಿಣ್ಡಿಮಃ ॥ ೧೮ ॥

ಅದ್ವೈತದ್ವೈತವಾದೌ ದ್ವೌ
ಸೂಕ್ಷ್ಮಸ್ಥೂಲದಶಾಂ ಗತೌ ।
ಅದ್ವೈತವಾದಾನ್ಮೋಕ್ಷಃ ಸ್ಯಾ-
ದಿತಿ ವೇದಾನ್ತಡಿಣ್ಡಿಮಃ ॥ ೧೯ ॥

ಕರ್ಮಿಣೋ ವಿನಿವರ್ತನ್ತೇ
ನಿವರ್ತನ್ತೇ ಉಪಾಸಕಾಃ ।
ಜ್ಞಾನಿನೋ ನ ನಿವರ್ತನ್ತ
ಇತಿ ವೇದಾನ್ತಡಿಣ್ಡಿಮಃ ॥ ೨೦ ॥

ಪರೋಕ್ಷಾಸತ್ಫಲಂ ಕರ್ಮ
ಜ್ಞಾನಂ ಪ್ರತ್ಯಕ್ಷಸತ್ಫಲಮ್ ।
ಜ್ಞಾನಮೇವಾಭ್ಯಸೇತ್ತಸ್ಮಾ-
ದಿತಿ ವೇದಾನ್ತಡಿಣ್ಡಿಮಃ ॥ ೨೧ ॥

ವೃಥಾ ಶ್ರಮೋಽಯಂ ವಿದುಷಾಂ
ವೃಥಾಯಂ ಕರ್ಮಿಣಾಂ ಶ್ರಮಃ ।
ಯದಿ ನ ಬ್ರಹ್ಮ ವಿಜ್ಞಾನ-
ಮಿತಿ ವೇದಾನ್ತಡಿಣ್ಡಿಮಃ ॥ ೨೨ ॥

ಅಲಂ ಯಾಗೈರಲಂ ಯೋಗೈ-
ರಲಂ ಭೋಗೈರಲಂ ಧನೈಃ ।
ಪರಸ್ಮಿನ್ ಬ್ರಹ್ಮಣಿ ಜ್ಞಾತ
ಇತಿ ವೇದಾನ್ತಡಿಣ್ಡಿಮಃ ॥ ೨೩ ॥

ಅಲಂ ವೇದೈರಲಂ ಶಾಸ್ತ್ರೈ-
ರಲಂ ಸ್ಮೃತಿಪುರಾಣಕೈಃ ।
ಪರಮಾತ್ಮನಿ ವಿಜ್ಞಾತ
ಇತಿ ವೇದಾನ್ತಡಿಣ್ಡಿಮಃ ॥ ೨೪ ॥

ನರ್ಚೋ ನ ಯಜುಷಾರ್ಥೋಽಸ್ತಿ
ನ ಸಾಮ್ನಾರ್ಥೋಽಸ್ತಿ ಕಶ್ಚನ ।
ಜಾತೇ ಬ್ರಹ್ಮಾತ್ಮವಿಜ್ಞಾನ
ಇತಿ ವೇದಾನ್ತಡಿಣ್ಡಿಮಃ ॥ ೨೫ ॥

ಕರ್ಮಾಣಿ ಚಿತ್ತಶುದ್ಧ್ಯರ್ಥ-
ಮೈಕಾಗ್ರ್ಯಾರ್ಥಮುಪಾಸನಾ ।
ಮೋಕ್ಷಾರ್ಥಂ ಬ್ರಹ್ಮವಿಜ್ಞಾನ-
ಮಿತಿ ವೇದಾನ್ತಡಿಣ್ಡಿಮಃ ॥ ೨೬ ॥

ಸಞ್ಚಿತಾಗಾಮಿಕರ್ಮಾಣಿ
ದಹ್ಯನ್ತೇ ಜ್ಞಾನವಹ್ನಿನಾ ।
ಪ್ರಾರಬ್ಧಾನ್ಯಪ್ಯನುಭವಾ-
ದಿತಿ ವೇದಾನ್ತಡಿಣ್ಡಿಮಃ ॥ ೨೭ ॥

ನ ಪುಣ್ಯಕರ್ಮಣೋ ವೃದ್ಧಿ-
ರ್ನ ಹಾನಿಃ ಪಾಪಕರ್ಮಣಃ ।
ನಿತ್ಯಾಸಙ್ಗಾತ್ಮನಿಷ್ಠಾನಾ-
ಮಿತಿ ವೇದಾನ್ತಡಿಣ್ಡಿಮಃ ॥ ೨೮ ॥

ಬುದ್ಧಿಪೂರ್ವಾಬುದ್ಧಿಪೂರ್ವ-
ಕೃತಾನಾಂ ಪಾಪಕರ್ಮಣಾಮ್ ।
ಪ್ರಾಯಶ್ಚಿತ್ತಮಹೋ ಜ್ಞಾನ-
ಮಿತಿ ವೇದಾನ್ತಡಿಣ್ಡಿಮಃ ॥ ೨೯ ॥

ದೃಗ್ದೃಶ್ಯೌ ದ್ವೌ ಪದಾರ್ಥೌ ತೌ
  ಪರಸ್ಪರವಿಲಕ್ಷಣೌ ।
ದೃಗ್ ಬ್ರಹ್ಮ ದೃಶ್ಯಂ ಮಾಯಾ ಸ್ಯಾ-
  ದಿತಿ ವೇದಾನ್ತಡಿಣ್ಡಿಮಃ ॥ ೩೦ ॥

ಅವಿದ್ಯೋಪಾಧಿಕೋ ಜೀವೋ
  ಮಾಯೋಪಾಧಿಕ ಈಶ್ವರಃ ।
ಮಾಯಾವಿದ್ಯಾಗುಣಾತೀತಂ
  ಬ್ರಹ್ಮ ವೇದಾನ್ತಡಿಣ್ಡಿಮಃ ॥ ೩೧ ॥

ಸಾಕಾರಂ ಚ ನಿರಾಕಾರಂ
  ಸಗುಣಂ ಚ ಗುಣಾತ್ಮಕಮ್ ।
ತತ್ತ್ವಂ ತದ್ ಬ್ರಹ್ಮ ಪರಮ-
  ಮಿತಿ ವೇದಾನ್ತಡಿಣ್ಡಿಮಃ ॥ ೩೨ ॥

ದ್ವಿಜತ್ವಂ ವಿಧ್ಯನುಷ್ಠಾನಾದ್
  ವಿಪ್ರತ್ವಂ ವೇದಪಾಠತಃ ।
ಬ್ರಾಹ್ಮಣ್ಯಂ ಬ್ರಹ್ಮವಿಜ್ಞಾನಾ-
  ದಿತಿ ವೇದಾನ್ತಡಿಣ್ಡಿಮಃ ॥ ೩೩ ॥

ಸರ್ವಾತ್ಮನಾ ಸ್ಥಿತಂ ಬ್ರಹ್ಮ
  ಸರ್ವಂ ಬ್ರಹ್ಮಾತ್ಮನಾ ಸ್ಥಿತಮ್ ।
ನ ಕಾರ್ಯಂ ಕಾರಣಾದ್ಭಿನ್ನ-
  ಮಿತಿ ವೇದಾನ್ತಡಿಣ್ಡಿಮಃ ॥ ೩೪ ॥

ಸತ್ತಾಸ್ಫುರಣಸೌಖ್ಯಾನಿ
ಭಾಸನ್ತೇ ಸರ್ವವಸ್ತುಷು ।
ತಸ್ಮಾದ್ ಬ್ರಹ್ಮಮಯಂ ಸರ್ವ-
ಮಿತಿ ವೇದಾನ್ತಡಿಣ್ಡಿಮಃ ॥ ೩೫ ॥

ಘಟಕುಡ್ಯಾದಿಕಂ ಸರ್ವಂ
ಮೃತ್ತಿಕಾಮಾತ್ರಮೇವ ಚ ।
ತಥಾ ಬ್ರಹ್ಮ ಜಗತ್ಸರ್ವ-
ಮಿತಿ ವೇದಾನ್ತಡಿಣ್ಡಿಮಃ ॥ ೩೬ ॥

ಅವಸ್ಥಾತ್ರಿತಯಂ ಯಸ್ಯ
ಕ್ರೀಡಾಭೂಮಿತಯಾ ಸ್ಥಿತಮ್ ।
ತದೇವ ಬ್ರಹ್ಮ ಜಾನೀಯಾ-
ದಿತಿ ವೇದಾನ್ತಡಿಣ್ಡಿಮಃ ॥ ೩೭ ॥

ಯನ್ನಾದೌ ಯಚ್ಚ ನಾಸ್ತ್ಯನ್ತೇ
ತನ್ಮಧ್ಯೇ ಭಾತಮಪ್ಯಸತ್ ।
ಅತೋ ಮಿಥ್ಯಾ ಜಗತ್ಸರ್ವ-
ಮಿತಿ ವೇದಾನ್ತಡಿಣ್ಡಿಮಃ ॥ ೩೮ ॥

ಯದಸ್ತ್ಯಾದೌ ಯದಸ್ತ್ಯನ್ತೇ
ಯನ್ಮಧ್ಯೇ ಭಾತಿ ತತ್ಸ್ವಯಮ್ ।
ಬ್ರಹ್ಮೈವೈಕಮಿದಂ ಸತ್ಯ-
ಮಿತಿ ವೇದಾನ್ತಡಿಣ್ಡಿಮಃ ॥ ೩೯ ॥

ಪುರುಷಾರ್ಥತ್ರಯಾವಿಷ್ಟಾಃ
ಪುರುಷಾಃ ಪಶವೋ ಧ್ರುವಮ್ |
ಮೋಕ್ಷಾರ್ಥೀ ಪುರುಷಶ್ರೇಷ್ಠ
ಇತಿ ವೇದಾನ್ತಡಿಣ್ಡಿಮಃ || ೪೦ ||

ಷಣ್ಣಿಹತ್ಯ ತ್ರಯಂ ಹಿತ್ವಾ
ದ್ವಯಂ ಭಿತ್ವಾಽಖಿಲಾತಿಗಮ್ |
ಏಕಂ ಬುದ್ಧ್ವಾಽಶ್ನುತೇ ಮೋಕ್ಷ-
ಮಿತಿ ವೇದಾನ್ತಡಿಣ್ಡಿಮಃ || ೪೧ ||

ಹಿತ್ವಾ ಷಟ್ ಪಞ್ಚ ಭಿತ್ವಾಽಥ
ಗತ್ವಾಗ್ರೇ ಚತುರಸ್ತ್ರಿಕಮ್ |
ದ್ವಯಂ ಹಿತ್ವಾಶ್ರಯೇದೇಕ-
ಮಿತಿ ವೇದಾನ್ತಡಿಣ್ಡಿಮಃ || ೪೨ ||

ದೇಹೋ ನಾಹಮಹಂ ದೇಹೀ*
ದೇಹಸಾಕ್ಷೀತಿ ನಿಶ್ಚಯಾತ್ |
ಜನ್ಮಮೃತ್ಯುಪ್ರಹೀಣೋಽಸಾ-
ವಿತಿ ವೇದಾನ್ತಡಿಣ್ಡಿಮಃ || ೪೩ ||

ಪ್ರಾಣೋ ನಾಹಮಹಂ ದೇವಃ
ಪ್ರಾಣಸಾಕ್ಷೀತಿ ನಿಶ್ಚಯಾತ್ |
ಕ್ಷುತ್ಪಿಪಾಸೋಪಶಾನ್ತಿಃ ಸ್ಯಾ-
ದಿತಿ ವೇದಾನ್ತಡಿಣ್ಡಿಮಃ || ೪೪ ||

* 'ದೇವೋ' ಎಂಬ ಪಾಠವು ಇದಕ್ಕಿಂತ ಉತ್ತಮವೆಂದು ತೋರುವದು.

ಮನೋ ನಾಹಮಹಂ ದೇವೋ
ಮನಃಸಾಕ್ಷೀತಿ ನಿಶ್ಚಯಾತ್ ।
ಶೋಕಮೋಹಾಪಹಾನಿಃ ಸ್ಯಾ-
ದಿತಿ ವೇದಾನ್ತಡಿಣ್ಡಿಮಃ ॥ ೪೫ ॥

ಬುದ್ಧಿರ್ನಾಹಮಹಂ ದೇವೋ
ಬುದ್ಧಿಸಾಕ್ಷೀತಿ ನಿಶ್ಚಯಾತ್ ।
ಕರ್ತೃಭಾವನಿವೃತ್ತಿಃ ಸ್ಯಾ-
ದಿತಿ ವೇದಾನ್ತಡಿಣ್ಡಿಮಃ ॥ ೪೬ ॥

ನಾಜ್ಞಾನಂ ಸ್ಯಾಮಹಂ ದೇವೋಽ
ಜ್ಞಾನಸಾಕ್ಷೀತಿ ನಿಶ್ಚಯಾತ್ ।
ಸರ್ವಾನರ್ಥನಿವೃತ್ತಿಃ ಸ್ಯಾ-
ದಿತಿ ವೇದಾನ್ತಡಿಣ್ಡಿಮಃ ॥ ೪೭ ॥

ಅಹಂ ಸಾಕ್ಷೀತಿ ಯೋ ವಿದ್ಯಾ-
ದ್ವಿವಿಚ್ಯೈವಂ ಪುನಃ ಪುನಃ ।
ಸ ಏವ ಮುಕ್ತೋಽಸೌ ವಿದ್ವಾ-
ನಿತಿ ವೇದಾನ್ತಡಿಣ್ಡಿಮಃ ॥ ೪೮ ॥

ನಾಹಂ ಮಾಯಾ ನ ತತ್ಕಾರ್ಯಂ
ತತ್ಸಾಕ್ಷೀ ಪರಮೋಽಸ್ಮ್ಯಹಮ್ ।
ಇತಿ ನಿಃಸಂಶಯಜ್ಞಾನಾ-
ನ್ಮುಕ್ತಿರ್ವೇದಾನ್ತಡಿಣ್ಡಿಮಃ ॥ ೪೯ ॥

ನಾಹಂ ಸರ್ವಮಹಂ ಸರ್ವಂ
ಮಮ ಸರ್ವಮಿತಿ ಸ್ಫುಟಮ್ ।
ಜ್ಞಾತೇ ತತ್ತ್ವೇ ಕುತೋ ದುಃಖ-
ಮಿತಿ ವೇದಾನ್ತಡಿಣ್ಡಿಮಃ ॥ ೫೦ ॥

ದೇಹಾದಿಪಞ್ಚಕೋಶಸ್ಥಾ
ಯಾ ಸತ್ತಾ ಪ್ರತಿಭಾಸತೇ ।
ಸಾ ಸತ್ತಾತ್ಮಾ ನ ಸನ್ದೇಹ
ಇತಿ ವೇದಾನ್ತಡಿಣ್ಡಿಮಃ ॥ ೫೧ ॥

ದೇಹಾದಿಪಞ್ಚಕೋಶಸ್ಥಾ
ಯಾ ಸ್ಫೂರ್ತಿರನುಭೂಯತೇ ।
ಸಾ ಸ್ಫೂರ್ತಿರಾತ್ಮಾ ನೈವಾನ್ಯ-
ದಿತಿ ವೇದಾನ್ತಡಿಣ್ಡಿಮಃ ॥ ೫೨ ॥

ದೇಹಾದಿಪಞ್ಚಕೋಶಸ್ಥಾ
ಯಾ ಪ್ರೀತಿರನುಭೂಯತೇ ।
ಸಾ ಪ್ರೀತಿರಾತ್ಮಾ ಕೂಟಸ್ಥ
ಇತಿ ವೇದಾನ್ತಡಿಣ್ಡಿಮಃ ॥ ೫೩ ॥

ವ್ಯೋಮಾದಿಪಞ್ಚಭೂತಸ್ಥಾ
ಯಾ ಸತ್ತಾ ಭಾಸತೇ ನೃಣಾಮ್ ।
ಸಾ ಸತ್ತಾ ಪರಮಂ ಬ್ರಹ್ಮ
ಇತಿ ವೇದಾನ್ತಡಿಣ್ಡಿಮಃ ॥ ೫೪ ॥

ವ್ಯೋಮಾದಿಪಞ್ಚಭೂತಸ್ಥಾ
ಯಾ ಚಿದೇಕಾನುಭೂಯತೇ ।
ಸಾ ಚಿದೇವ ಪರಂ ಬ್ರಹ್ಮ
ನಾನ್ಯದ್ವೇದಾನ್ತಡಿಣ್ಡಿಮಃ ॥ ೫೫ ॥

ವ್ಯೋಮಾದಿಪಞ್ಚಭೂತಸ್ಥಾ
ಯಾ ಪ್ರೀತಿರನುಭೂಯತೇ ।
ಸಾ ಪ್ರೀತಿರೇವ ಬ್ರಹ್ಮ ಸ್ಯಾ-
ದಿತಿ ವೇದಾನ್ತಡಿಣ್ಡಿಮಃ ॥ ೫೬ ॥

ದೇಹಾದಿಕೋಶಗಾ ಸತ್ತಾ
ಯಾ ಸಾ ವ್ಯೋಮಾದಿಭೂತಗಾ ।
ಮಾನಾಭಾವಾನ್ನ ತದ್ಭೇದ
ಇತಿ ವೇದಾನ್ತಡಿಣ್ಡಿಮಃ ॥ ೫೭ ॥

ದೇಹಾದಿಕೋಶಗಾ ಸ್ಫೂರ್ತಿ-
ರ್ಯಾ ಸಾ ವ್ಯೋಮಾದಿಭೂತಗಾ ।
ಮಾನಾಭಾವಾನ್ನ ತದ್ಭೇದ
ಇತಿ ವೇದಾನ್ತಡಿಣ್ಡಿಮಃ ॥ ೫೮ ॥

ದೇಹಾದಿಕೋಶಗಾ ಪ್ರೀತಿ-
ರ್ಯಾ ಸಾ ವ್ಯೋಮಾದಿಭೂತಗಾ ।
ಮಾನಾಭಾವಾನ್ನ ತದ್ಭೇದ
ಇತಿ ವೇದಾನ್ತಡಿಣ್ಡಿಮಃ ॥ ೫೯ ॥

ಸಚ್ಚಿದಾನನ್ದರೂಪತ್ವಾ-
ದ್ಬ್ರಹ್ಮೈವಾತ್ಮಾ ನ ಸಂಶಯಃ
ಶ್ರುತಿಪ್ರಮಾನುಸನ್ಧಾನಾ-
ದಿತಿ ವೇದಾನ್ತಡಿಣ್ಡಿಮಃ || ೬೦ ||

ನ ಜೀವಬ್ರಹ್ಮಣೋರ್ಭೇದಃ
ಸತ್ತಾರೂಪೇಣ ವಿದ್ಯತೇ ।
ಸತ್ತಾಭೇದೇ ನ ಮಾನಂ ಸ್ಯಾ-
ದಿತಿ ವೇದಾನ್ತಡಿಣ್ಡಿಮಃ || ೬೧ ||

ನ ಜೀವಬ್ರಹ್ಮಣೋರ್ಭೇದಃ
ಸ್ಫೂರ್ತಿರೂಪೇಣ ವಿದ್ಯತೇ ।
ಸ್ಫೂರ್ತಿಭೇದೇ ನ ಮಾನಂ ಸ್ಯಾ-
ದಿತಿ ವೇದಾನ್ತಡಿಣ್ಡಿಮಃ || ೬೨ ||

ನ ಜೀವಬ್ರಹ್ಮಣೋರ್ಭೇಧಃ
ಪ್ರಿಯರೂಪೇಣ ವಿದ್ಯತೇ ।
ಪ್ರಿಯಭೇದೇ ನ ಮಾನಂ ಸ್ಯಾ-
ದಿತಿ ವೇದಾನ್ತಡಿಣ್ಡಿಮಃ || ೬೩ ||

ನ ಜೀವಬ್ರಹ್ಮಣೋರ್ಭೇದೋ
ನಾಮ್ನಾ ರೂಪೇಣ ವಿದ್ಯತೇ ।
ನಾಮ್ನೋ ರೂಪಸ್ಯ ಮಿಥ್ಯಾತ್ವಾ-
ದಿತಿ ವೇದಾನ್ತಡಿಣ್ಡಿಮಃ || ೬೪ ||

ನ ನಾಮರೂಪೇ ನಿಯತೇ
ಸರ್ವತ್ರ ವ್ಯಭಿಚಾರತಃ ।
ಅನಾಮರೂಪಃ ಸರ್ವಃ ಸ್ಯಾ-
ದಿತಿ ವೇದಾನ್ತಡಿಣ್ಡಿಮಃ ॥ ೬೫ ॥

ನ ಜೀವಬ್ರಹ್ಮಣೋರ್ಭೇದಃ
ಪಿಣ್ಡಬ್ರಹ್ಮಾಣ್ಡಭೇದತಃ ।
ವ್ಯಷ್ಟೇಃ ಸಮಷ್ಟೇರೇಕತ್ವಾ-
ದಿತಿ ವೇದಾನ್ತಡಿಣ್ಡಿಮಃ ॥ ೬೬ ॥

ಬ್ರಹ್ಮ ಸತ್ಯಂ ಜಗನ್ಮಿಥ್ಯಾ
ಜೀವೋ ಬ್ರಹ್ಮೈವ ನಾಪರಃ ।
ಜೀವನ್ಮುಕ್ತಸ್ತು ತದ್ವಿದ್ವಾ-
ನಿತಿ ವೇದಾನ್ತಡಿಣ್ಡಿಮಃ ॥ ೬೭ ॥

ಅನಾಮರೂಪಂ ಸಕಲಂ
ಸನ್ಮಯಂ ಚಿನ್ಮಯಂ ಪ್ರಿಯಮ್ ।
ಕುತೋ ಭೇದಃ ಕುತೋ ಬನ್ಧ
ಇತಿ ವೇದಾನ್ತಡಿಣ್ಡಿಮಃ ॥ ೬೮ ॥

ನ ಸತ್ಯಃ ಕಥ್ಯತೇ ಲೋಕೋ
ನಾಮಾದೇರ್ವ್ಯಭಿಚಾರತಃ ।
ವಟುಃ ಕುಲಟ ಇತ್ಯಾದೇ-
ರಿತಿ ವೇದಾನ್ತಡಿಣ್ಡಿಮಃ ॥ ೬೯ ॥

ನಾಮರೂಪಾತ್ಮಕಂ ವಿಶ್ವ-
ಮಿನ್ದ್ರಜಾಲಂ ವಿದುರ್ಬುಧಾಃ ।
ಅನಾಮತ್ವಾದರೂಪತ್ವಾ-
ದಿತಿ ವೇದಾನ್ತಡಿಣ್ಡಿಮಃ ॥ ೭೦ ॥

ಅಭೇದದರ್ಶನಂ ಮೋಕ್ಷಃ
ಸಂಸಾರೋ ಭೇದದರ್ಶನಮ್ ।
ಸರ್ವವೇದಾನ್ತಸಿದ್ಧಾನ್ತ
ಇತಿ ವೇದಾನ್ತಡಿಣ್ಡಿಮಃ ॥ ೭೧ ॥

ನ ಮತಾಭಿನಿವೇಶೇನ
ನ ಭಾಷಾವೇಷಮಾತ್ರತಃ ।
ಮುಕ್ತಿರ್ವಿನಾತ್ಮವಿಜ್ಞಾನ-
ಮಿತಿ ವೇದಾನ್ತಡಿಣ್ಡಿಮಃ ॥ ೭೨ ॥

ನ ಕಾಮ್ಯಪ್ರತಿಷಿದ್ಧಾಭಿಃ
ಕ್ರಿಯಾಭಿರ್ಮೋಕ್ಷವಾಸನಾ ।
ಈಶ್ವರಾನುಗ್ರಹಾತ್ ಸಾ ಸ್ಯಾ-
ದಿತಿ ವೇದಾನ್ತಡಿಣ್ಡಿಮಃ ॥ ೭೩ ॥

ಅವಿಜ್ಞಾತೇ ಜನ್ಮನಷ್ಟಂ
ವಿಜ್ಞಾತೇ ಜನ್ಮಸಾರ್ಥಕಮ್ ।
ಜ್ಞಾತುರಾತ್ಮಾ ನ ದೂರೇ ಸ್ಯಾ-
ದಿತಿ ವೇದಾನ್ತಡಿಣ್ಡಿಮಃ ॥ ೭೪ ॥

ದಶಮಸ್ಯ ಪರಿಜ್ಞಾನೇ
ನಾಯಾಸೋಽಸ್ತಿ ಯಥಾತಥಾ ।
ಸ್ವಸ್ಯ ಬ್ರಹ್ಮಾತ್ಮವಿಜ್ಞಾನ
ಇತಿ ವೇದಾನ್ತಡಿಣ್ಡಿಮಃ ॥ ೭೫ ॥

ಉಪೇಕ್ಷ್ಯೌಪಾಧಿಕಾನ್ ದೋಷಾನ್
ಗೃಹ್ಯನ್ತೇ ವಿಷಯಾ ಯಥಾ ।
ಉಪೇಕ್ಷ್ಯ ದೃಶ್ಯಂ ತದ್ಬ್ರಹ್ಮ
ಇತಿ ವೇದಾನ್ತಡಿಣ್ಡಿಮಃ ॥ ೭೬ ॥

ಸುಖಮಲ್ಪಂ ಬಹುಕ್ಲೇಶಂ
ವಿಷಯಗ್ರಾಹಿಣಾಂ ನೃಣಾಮ್ ।
ಅನನ್ತಂ ಬ್ರಹ್ಮನಿಷ್ಠಾನಾ-
ಮಿತಿ ವೇದಾನ್ತಡಿಣ್ಡಿಮಃ ॥ ೭೭ ॥

ಧನೈರ್ವಾ ಧನದೈಃ ಪುತ್ರೈ-
ರ್ದಾರಾಗಾರಸಹೋದರೈಃ ।
ಧ್ರುವಂ ಪ್ರಾಣಹರೈರ್ದುಃಖ-
ಮಿತಿ ವೇದಾನ್ತಡಿಣ್ಡಿಮಃ ॥ ೭೮ ॥

ಸುಪ್ತೇರುತ್ಥಾಯ ಸುಪ್ತ್ಯನ್ತಂ
ಬ್ರಹ್ಮೈಕಂ ಪ್ರವಿಚಿನ್ತ್ಯತಾಮ್ ।
ನಾತಿದೂರೇ ನೃಣಾಂ ಮೃತ್ಯು-
ರಿತಿ ವೇದಾನ್ತಡಿಣ್ಡಿಮಃ ॥ ೭೯ ॥

ಪಞ್ಚಾನಾಮಪಿ ಕೋಶಾನಾಂ
ಮಾಯಯಾನರ್ಥಾತ್ಮತೋಽಚಿತಾ ।
ತತ್ಸಾಕ್ಷಿಬ್ರಹ್ಮವಿಜ್ಞಾನಾ-
ದಿತಿ ವೇದಾನ್ತಡಿಣ್ಡಿಮಃ ॥ ೮೦ ॥

ದಶಮಸ್ಯ ಪರಿಜ್ಞಾನಾ-
ನ್ನವಜ್ಞಸ್ಯ ಯಥಾ ಸುಖಮ್ ।
ತಥಾ ಜೀವಸ್ಯ ಸತ್ಪ್ರಾಪ್ತೇ-
ರಿತಿ ವೇದಾನ್ತಡಿಣ್ಡಿಮಃ ॥ ೮೧ ॥

ಸರ್ವೇಭ್ಯೋಽಸ್ತಿ ಪರಃ ಪ್ರತ್ಯಙ್
ಙ್ನೈವ ವೇದ ಪರಂ ಪದಮ್ ।
ತದ್ವಿಜ್ಞಾನಾದ್ಭವೇತ್ತುಲ್ಯಾ
ಮುಕ್ತಿರ್ವೇದಾನ್ತಡಿಣ್ಡಿಮಃ ॥ ೮೨ ॥

ಸರ್ವಾಭಾಸಾನ್ನವ ಜ್ಞಾತ್ವಾ
ಸರ್ವೋಪಾಧೀನ್ನವಾತ್ಮನಾ ।
ಮಿಥ್ಯಾಜ್ಞಾತ್ವಾವಶಿಷ್ಟೇ ತು
ಮೌನಂ ವೇದಾನ್ತಡಿಣ್ಡಿಮಃ ॥ ೮೩ ॥

ಪರಮೇ ಬ್ರಹ್ಮಣಿ ಸ್ವಸ್ಮಿನ್
ಪ್ರವಿಲಾಪ್ಯಾಖಿಲಂ ಜಗತ್ ।
ಗಾಯನ್ನದ್ವೈತಮಾತ್ಮಾನ-
ಮಾಸ್ತೇ ವೇದಾನ್ತಡಿಣ್ಡಿಮಃ ॥ ೮೪ ॥

ಪ್ರತಿಲೋಮಾನುಲೋಮಾಭ್ಯಾಂ
ವಿಶ್ವಾರೂಪಾಪವಾದಯೋಃ ।

ಚಿನ್ತನೇ ಶಿಷ್ಯತೇ ತತ್ತ್ವ-
ಮಿತಿ ವೇದಾನ್ತಡಿಣ್ಡಿಮಃ ॥ ೪೫ ॥

ನಾಮರೂಪಾಭಿಮಾನಃ ಸ್ಯಾ-
ತ್ಸಂಸಾರಃ ಸರ್ವದೇಹಿನಾಮ್ ।
ಸಚ್ಚಿದಾನನ್ದದೃಷ್ಟಿಃ ಸ್ಯಾ-
ನ್ಮುಕ್ತಿರ್ವೇದಾನ್ತಡಿಣ್ಡಿಮಃ ॥ ೪೬ ॥

ಸಚ್ಚಿದಾನನ್ದಸತ್ಯತ್ವೇ
ಮಿಥ್ಯಾತ್ವೇ ನಾಮರೂಪಯೋಃ ।
ವಿಜ್ಞಾತೇ ಕಿಮಿದಂ ಜ್ಞೇಯ-
ಮಿತಿ ವೇದಾನ್ತಡಿಣ್ಡಿಮಃ ॥ ೪೭ ॥

ಸಾಲಮ್ಬನಂ ನಿರಾಲಮ್ಬಂ
ಸರ್ವಾಲಮ್ಬಾವಲಮ್ಬಿತಮ್ ।
ಅವಲಮ್ಬ್ಯೇನಾಖಿಲಾಲಮ್ಬ
ಇತಿ ವೇದಾನ್ತಡಿಣ್ಡಿಮಃ ॥ ೪೮ ॥

ನ ಕುರ್ಯಾನ್ನ ವಿಜಾನೀಯಾತ್
ಸರ್ವಂ ಬ್ರಹ್ಮೇತ್ಯನುಸ್ಮರನ್ ।
ಯಥಾಸುಖಂ ತಥಾ ತಿಷ್ಠೇ-
ದಿತಿ ವೇದಾನ್ತಡಿಣ್ಡಿಮಃ ॥ ೪೯ ॥

ಸ್ವಕರ್ಮಪಾಶವಶಗಃ
ಪ್ರಾಜ್ಞೋಽನ್ಯೋ ವಾ ಜನೋ ಧ್ರುವಮ್ ।
ಪ್ರಾಜ್ಞಃ ಸುಖಂ ನಯೇತ್ಕಾಲ-
ಮಿತಿ ವೇದಾನ್ತಡಿಣ್ಡಿಮಃ ॥ ೫೦ ॥

ನ ವಿದ್ವಾಂಸಂ ತಪೇಚ್ಚಿತ್ತಂ
ಕರಣೇಽಕರಣೇ ಧ್ರುವಮ್ ।
ಸರ್ವಮಾತ್ಮೇತಿ ವಿಜ್ಞಾನಾ-
ದಿತಿ ವೇದಾನ್ತಡಿಣ್ಡಿಮಃ ॥ ೯೧ ॥

ನೈವಾಭಾಸಂ ಸ್ಪೃಶೇತ್ಕರ್ಮ
ಮಿಥ್ಯೋಪಾಧಿಮಪಿ ಸ್ವಯಮ್ ।
ಕುತೋಽಧಿಷ್ಠಾನಮತ್ಯಚ್ಛ-
ಮಿತಿ ವೇದಾನ್ತಡಿಣ್ಡಿಮಃ ॥ ೯೨ ॥

ಅಹೋಽಸ್ಮಾಕಮಲಂ ಮೋಹೈ-
ರಾತ್ಮಾ ಬ್ರಹ್ಮೇತಿ ನಿರ್ಭಯಮ್ ।
ಶ್ರುತಿಭೇರೀರವೋಽದ್ಯಾಪಿ
ಶ್ರೂಯತೇ ಶ್ರುತಿರಞ್ಜನಃ ॥ ೯೩ ॥

ವೇದಾನ್ತಭೇರೀಝುಙ್ಕಾರಃ
ಪ್ರತಿವಾದಿಭಯಙ್ಕರಃ ।
ಶ್ರೂಯತಾಂ ಬ್ರಾಹ್ಮಣೈಃ ಶ್ರೀಮ-
ದ್ದಕ್ಷಿಣಾಮೂರ್ತ್ಯನುಗ್ರಹಾತ್ ॥ ೯೪ ॥

ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಮನ್ನೃಸಿಂಹ ಸರಸ್ವತೀತೀರ್ಥವಿರಚಿತೋ ವೇದಾನ್ತಡಿಣ್ಡಿಮಃ ಸಮಾಪ್ತಃ.

ಮುಖ್ಯವಿಷಯಗಳ ಅಕ್ಷರಾನುಕ್ರಮಣಿಕೆ

ಓಂ

ವೇದಾಂತಡಿಂಡಿಮ

೧. ವೇದಾಂತದ ಡಂಗುರಗಳು ಯಾವ ತತ್ತ್ವವನ್ನು ಸಾರುತ್ತಲಿರುವವೋ ಆ ದಕ್ಷಿಣಾಮೂರ್ತಿಯೆಂಬ ತೇಜಸ್ಸು ನಮ್ಮ ಮುಂದಿರಲಿ.

೨. ಆತ್ಮ, ಅನಾತ್ಮ- ಎಂಬ ಎರಡು ಪದಾರ್ಥಗಳುಂಟು; ಇವುಗಳಲ್ಲಿ ಒಂದು ಭೋಕ್ತೃ, ಮತ್ತೊಂದು ಭೋಗ್ಯವು, ಬ್ರಹ್ಮವೇ ಆತ್ಮನು, ದೇಹಾದಿಗಳಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

೩. ಜ್ಞಾತೃ, ಜ್ಞೇಯ- ಎಂಬ ಎರಡು ಪದಾರ್ಥಗಳುಂಟು; ಇವುಗಳಲ್ಲಿ ಒಂದು ಬೆಳಗಿಸಲ್ಪಡುವದು, ಇನ್ನೊಂದು ಬೆಳಗುವದು. ಬ್ರಹ್ಮವೇ ಜ್ಞಾತೃ, ಜಗತ್ತೇ ಜ್ಞೇಯವು. ಹೀಗೆಂಬುದು ವೇದಾಂತಗಳ ಡಂಗುರವು.

೪. ಜ್ಞಾನ, ಅಜ್ಞಾನ- ಎಂದು ಎರಡು ಪದಾರ್ಥಗಳುಂಟು; ಇವುಗಳಲ್ಲಿ ಒಂದು ಆತ್ಮನಿಗೆ ಬಂಧವನ್ನೂ ಮತ್ತೊಂದು ಮುಕ್ತಿಯನ್ನೂ ಕೊಡುವದು; ಜ್ಞಾನವು ಮುಕ್ತಿಯನ್ನು ಕೊಡುವದು, ಅಜ್ಞಾನವು ಬಂಧವನ್ನುಂಟುಮಾಡುವದು. ಹೀಗೆಂಬುದು ವೇದಾಂತಗಳ ಡಂಗುರವು.

೫. ಸುಖ, ದುಃಖ- ಎಂದು ಎರಡು ಪದಾರ್ಥಗಳುಂಟು; ಇವುಗಳಲ್ಲಿ ಒಂದು ಪ್ರಿಯವನ್ನುಂಟುಮಾಡುವದು, ಇನ್ನೊಂದು ಅಪ್ರಿಯವನ್ನುಂಟುಮಾಡುವದು. ಬ್ರಹ್ಮವೇ ಸುಖವು, ಜಗತ್ತೇ ದುಃಖವು. ಹೀಗೆಂಬುದು ವೇದಾಂತಗಳ ಡಂಗುರವು.

೬. ಸಮಷ್ಟಿ (ಒಟ್ಟು), ವ್ಯಷ್ಟಿ (ಬಿಡಿ)- ಎಂದು ಎರಡು ಪದಾರ್ಥಗಳುಂಟು; ಇವುಗಳನ್ನು ಎಲ್ಲರೂ ಒಪ್ಪಿರುತ್ತಾರೆ. ಈಶ್ವರನೇ ಸಮಷ್ಟಿ, ಜೀವನೇ ವ್ಯಷ್ಟಿ. ಹೀಗೆಂಬುದು ವೇದಾಂತಗಳ ಡಂಗುರವು.

೭. ಜ್ಞಾನ, ಕರ್ಮ- ಎಂದು ಎರಡು ಪದಾರ್ಥಗಳುಂಟು; ಇವುಗಳಲ್ಲಿ ಒಂದು ವಸ್ತುತಂತ್ರ (ವಸ್ತುವಿಗಧೀನವಾಗಿ ಉಂಟಾಗುವದು), ಇನ್ನೊಂದು ಕರ್ತೃತಂತ್ರ, (ಮಾಡು

ವವನಿಗೆ ಅಧೀನವಾಗಿ ಉಂಟಾಗುವದು) ಜ್ಞಾನದಿಂದ ಮೋಕ್ಷವೇ ಹೊರತು, ಕರ್ಮಗಳಿಂದ ಆಗುವದಿಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

೮. ಕಿವಿಗೊಟ್ಟು ಕೇಳತಕ್ಕದ್ದು, ಕೇಳಬಾರದ್ದು– ಎಂದು ಎರಡು ಪದಾರ್ಥಗಳುಂಟು; ಇವುಗಳಲ್ಲಿ ಒಂದು (ಕೇಳಿದರೆ) ಸುಖವನ್ನುಂಟುಮಾಡುವದು. ಇನ್ನೊಂದು ದುಃಖವನ್ನುಂಟುಮಾಡುವದು. ಬ್ರಹ್ಮವೇ ಕೇಳತಕ್ಕದ್ದು, ಮತ್ತೊಂದು ಕೇಳತಕ್ಕದ್ದೇ ಅಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

೯. ಯೋಚಿಸತಕ್ಕದ್ದು, ಯೋಚಿಸಬಾರದ್ದು– ಎಂದು ಎರಡು ಪದಾರ್ಥಗಳುಂಟು: ಇವುಗಳಲ್ಲಿ ಒಂದು (ವಿಚಾರಮಾಡಿದರೆ) ವಿಶ್ರಾಂತಿಯನ್ನು ಕೊಡುವದು, ಇನ್ನೊಂದು ಆಯಾಸವನ್ನುಂಟುಮಾಡುವದು. ಪರಬ್ರಹ್ಮವೇ ನಾವು ವಿಚಾರಮಾಡತಕ್ಕದ್ದು, ಮತ್ತೊಂದಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

೧೦. ಧ್ಯಾನಮಾಡತಕ್ಕದ್ದು, ಧ್ಯಾನಮಾಡಬಾರದ್ದು– ಎಂದು ಎರಡು ಪದಾರ್ಥಗಳುಂಟು; ಬ್ರಹ್ಮವೇ ಧ್ಯಾನಮಾಡತಕ್ಕದ್ದು, ಮತ್ತೊಂದು ಯಾವದೂ ಧ್ಯಾನಮಾಡತಕ್ಕದ್ದಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

೧೧. ಯೋಗಿಗಾಗಲಿ, ಭೋಗಿಗಾಗಲಿ, ತ್ಯಾಗಿಗಾಗಲಿ, ವಿಷಯಾಸಕ್ತನಿಗಾಗಲಿ– ಜ್ಞಾನದಿಂದ ಮೋಕ್ಷವಾಗುವದು, ಸಂಶಯವಿಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

೧೨. ವರ್ಣ, ಆಶ್ರಮ– ಇವುಗಳ ಹೆಸರನ್ನು ಇಟ್ಟುಕೊಂಡಮಾತ್ರದಿಂದಲಾಗಲಿ ಬರಿಯ ಕರ್ಮ, ಉಪಾಸನೆ– ಮುಂತಾದವುಗಳನ್ನು ಮಾಡಿದ ಮಾತ್ರದಿಂದಲಾಗಲಿ ಬ್ರಹ್ಮಜ್ಞಾನವಿದ್ದ ಹೊರತು ಮೋಕ್ಷವಾಗಲಾರದು. ಹೀಗೆಂದು ವೇದಾಂತಗಳ ಡಂಗುರವು.

೧೩. ಈ ಸಂಸಾರವೆಲ್ಲವೂ ಅಸತ್ಯವು, ತೋರಿಕೆಯ ಸುಖವೇ ಮುಂತಾದ ದೋಷಗಳುಳ್ಳದ್ದು; ಆದ್ದರಿಂದ ಇದನ್ನು ಉಪೇಕ್ಷಿಸತಕ್ಕದ್ದು, ಬ್ರಹ್ಮವನ್ನೇ ತಿಳಿಯತಕ್ಕದ್ದು. ಹೀಗೆಂಬುದು ವೇದಾಂತಗಳ ಡಂಗುರವು.

೧೪. ವ್ಯರ್ಥವಾದ ಕೆಲಸಗಳನ್ನೂ ವ್ಯರ್ಥವಾದ ಮಾತುಗಳನ್ನೂ ವ್ಯರ್ಥವಾದ ವಾದಗಳನ್ನೂ ಮನೋರಥಗಳನ್ನೂ ಬಿಟ್ಟು ಬ್ರಹ್ಮವೊಂದನ್ನೇ ತಿಳಿಯತಕ್ಕದ್ದು– ಹೀಗೆಂದು ವೇದಾಂತಗಳ ಡಂಗುರವು.

೧೫. ಜೀವನು ಬ್ರಹ್ಮರೂಪದಿಂದಲೇ ಇರುವನು, ಬ್ರಹ್ಮವೇ ಜೀವರೂಪವಾಗಿ ತೋರುತ್ತಿರುವದು- ಎಂದು ಕಂಡುಕೊಂಡವರಿಗೆ ಮುಕ್ತಿಯು. ಹೀಗೆಂದು ವೇದಾಂತಗಳ ಡಂಗುರವು.

೧೬. ಜೀವನನ್ನು ಬ್ರಹ್ಮರೂಪದಿಂದ ತಿಳಿಯಬೇಕು, ಪರಬ್ರಹ್ಮವೇ ಜೀವರೂಪದಿಂದ ತೋರುವದೆಂದು ಅರಿಯಬೇಕು. ಈ ಎರಡೂ ಒಂದೇ ಎಂದು ತಿಳಿದುಕೊಳ್ಳುವದರಿಂದ ಮುಕ್ತಿಯಾಗುವದು. ಹೀಗೆಂದು ವೇದಾಂತಗಳ ಡಂಗುರವು.

೧೭. ಪರಬ್ರಹ್ಮವು ಎಲ್ಲರ ಆತ್ಮನಾಗಿರುವದರಿಂದ ಶ್ರವಣಮಾಡುವಾತನ ಆತ್ಮನಾಗಿರುವದು; ಅದನ್ನು ಹೀಗೆಂದು ಅರಿತುಕೊಳ್ಳುವದರಲ್ಲಿ ಯಾವ ಆಯಾಸವೂ ಇಲ್ಲ. ಹೀಗೆಂದು ವೇದಾಂತಗಳ ಡಂಗುರವು.

೧೮. ಕರ್ಮರಾಶಿಯು ಇಹಲೋಕದ ಭೋಗಾರ್ಥವಾಗಿರಲಿ ಪರಲೋಕದ ಭೋಗಾರ್ಥವಾಗಿರಲಿ, ಕೊನೆಗೆ ಸಂಕಟದಲ್ಲಿಯೇ ಕೊನೆಗಾಣುವದರಿಂದ ಅದನ್ನು ಬಿಟ್ಟು ಬ್ರಹ್ಮನನ್ನೇ ಅರಿಯತಕ್ಕದ್ದು. ಹೀಗೆಂದು ವೇದಾಂತಗಳ ಡಂಗುರವು.

೧೯. ಅದ್ವೈತವಾದ, ದ್ವೈತವಾದ- ಎಂದು ಎರಡು ವಾದಗಳುಂಟು ; ಇವುಗಳಲ್ಲಿ ಒಂದು (ದ್ವೈತವು) ಸ್ಥೂಲವಾದದ್ದು, ಇನ್ನೊಂದು ಸೂಕ್ಷ್ಮವಾದದ್ದು. ಇವುಗಳಲ್ಲಿ ಅದ್ವೈತವಾದದಿಂದ ಮೋಕ್ಷವಾಗುವದು. ಹೀಗೆಂದು ವೇದಾಂತಗಳ ಡಂಗುರವು.

೨೦. ಕರ್ಮಿಗಳು ಹಿಂತಿರುಗುವರು, ಉಪಾಸಕರು ಹಿಂತಿರುಗುವರು ; ಆದರೆ ಜ್ಞಾನಿಗಳು ಮಾತ್ರ ಹಿಂತಿರುಗುವದಿಲ್ಲ. ಹೀಗೆಂದು ವೇದಾಂತಗಳ ಡಂಗುರವು.

೨೧. ಕರ್ಮವು ಪರೋಕ್ಷವಾದ ಮಿಥ್ಯಾಫಲವುಳ್ಳದ್ದು, ಜ್ಞಾನವು ಪ್ರತ್ಯಕ್ಷವಾದ ಸತ್ಯಫಲವುಳ್ಳದ್ದು ; ಆದ್ದರಿಂದ ಜ್ಞಾನವನ್ನೇ ಅಭ್ಯಾಸಮಾಡಬೇಕು. ಹೀಗೆಂದು ವೇದಾಂತಗಳ ಡಂಗುರವು.

೨೨. ಬ್ರಹ್ಮದ ಜ್ಞಾನವೊಂದು ಆಗದಿದ್ದರೆ ವಿದ್ವಾಂಸರ ಶ್ರಮವೂ ವ್ಯರ್ಥ, ಕರ್ಮಿಗಳ ಶ್ರಮವೂ ವ್ಯರ್ಥ. ಹೀಗೆಂದು ವೇದಾಂತಗಳ ಡಂಗುರವು.

೨೩. ಪರಬ್ರಹ್ಮವನ್ನು ತಿಳಿದರೆ ಯಾಗಗಳು ಏಕೆ? ಯೋಗಗಳು ಏಕೆ ? ಭೋಗಗಳು ಏಕೆ? ಹಣಕಾಸುಗಳು ಏಕೆ? ಹೀಗೆಂಬುದು ವೇದಾಂತಗಳ ಡಂಗುರವು.

೨೪. ಪರಮಾತ್ಮನನ್ನು ಅರಿತರೆ ವೇದಗಳಿಂದೇನು? ಶಾಸ್ತ್ರಗಳಿಂದೇನು? ಸ್ಮೃತಿ ಪುರಾಣಗಳಿಂದೇನು? ಹೀಗೆಂದು ವೇದಾಂತಗಳ ಡಂಗುರವು.

೨೫. ಬ್ರಹ್ಮಾತ್ಮನ ಜ್ಞಾನವುಂಟಾದರೆ, ಋಕ್ಕಿನಿಂದಾಗಲಿ ಯಜುಸ್ಸಿನಿಂದಾಗಲಿ ಸಾಮದಿಂದಾಗಲಿ ಯಾವ ಪ್ರಯೋಜನವೂ ಇಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

೨೬. ಕರ್ಮಗಳು ಚಿತ್ತದ ಶುದ್ಧಿಗಾಗಿ, ಉಪಾಸನೆಯು ಚಿತ್ತದ ಏಕಾಗ್ರತೆಗಾಗಿ, ಬ್ರಹ್ಮಜ್ಞಾನವು ಮೋಕ್ಷಕ್ಕಾಗಿ. ಹೀಗೆಂದು ವೇದಾಂತಗಳ ಡಂಗುರವು.

೨೭. ಜ್ಞಾನವೆಂಬ ಬೆಂಕಿಯಿಂದ ಸಂಚಿತ(ಹಿಂದೆ ರಾಶಿ ಹಾಕಿದ)ಕರ್ಮ, ಆಗಾಮಿ (ಮುಂದೆ ಮಾಡಬಹುದಾದ)ಕರ್ಮ– ಈ ಎರಡೂ ಸುಟ್ಟುಹೋಗುವವು ; ಪ್ರಾರಬ್ಧ(ಫಲವನ್ನು ಕೊಡುವದಕ್ಕೆ ಮೊದಲಾಗಿರುವ)ಕರ್ಮಗಳೂ ಅವುಗಳ ಫಲವನ್ನನುಭವಿಸುವದರಿಂದ ಸವೆಯುವವು. ಹೀಗೆಂದು ವೇದಾಂತಗಳ ಡಂಗುರವು.

೨೮. ಯಾವಾಗಲೂ ಅಸಂಗರಾಗಿ ಆತ್ಮಸ್ವರೂಪದಲ್ಲಿ ನಿಂತಿರುವವರಿಗೆ ಪುಣ್ಯಕರ್ಮದಿಂದ ಆಗುವ ಹೆಚ್ಚಿಗೆಯಿಲ್ಲ, ಪಾಪಕರ್ಮದಿಂದ ಆಗುವ ಕಡಿಮೆಯಿಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

೨೯. ಬುದ್ಧಿಪೂರ್ವಕವಾಗಿ ಮಾಡಿರುವ, ಮತ್ತು ಬುದ್ಧಿಪೂರ್ವಕವಲ್ಲದೆ ಮಾಡಿರುವ ಪಾಪಕರ್ಮಗಳಿಗೆಲ್ಲ ಜ್ಞಾನವು ಪ್ರಾಯಶ್ಚಿತ್ತವಾಗಿರುವದು. ಏನು ಆಶ್ಚರ್ಯ! ಹೀಗೆಂದು ವೇದಾಂತಗಳ ಡಂಗುರವು.

೩೦. ದೃಕ್ಕು, (ನೋಡುವದು) ದೃಶ್ಯ (ನೋಡಲ್ಪಡುವದು)– ಎಂದು ಎರಡು ಪದಾರ್ಥಗಳುಂಟು; ಅವು ಒಂದರ ಹಾಗೆ ಒಂದು ಇರುವದಿಲ್ಲ. ಬ್ರಹ್ಮವೇ ದೃಕ್ಕು, ಮಾಯೆಯೇ ದೃಶ್ಯವು. ಹೀಗೆಂದು ವೇದಾಂತಗಳ ಡಂಗುರವು.

೩೧. ಬ್ರಹ್ಮವು ಅವಿದ್ಯೆಯೆಂಬ ಉಪಾಧಿಯಿಂದ ಜೀವನೆಂದೂ ಮಾಯೆಯೆಂಬ ಉಪಾಧಿಯಿಂದ ಈಶ್ವರನೆಂದೂ ಎನಿಸಿಕೊಳ್ಳುವದು. ನಿಜವಾಗಿ ಮಾಯೆ, ಅವಿದ್ಯೆ– ಇವೆರಡರ ಧರ್ಮಗಳನ್ನೂ ಮೀರಿರುವದೇ ಅದೇ ಬ್ರಹ್ಮವೆನಿಸುವದು. ಹೀಗೆಂದು ವೇದಾಂತಗಳ ಡಂಗುರವು.

೩೨. ಆ ಪರಬ್ರಹ್ಮವೆಂಬ ತತ್ತ್ವವು ಆಕಾರದಿಂದ ಕೂಡಿರುವದು, ಆಕಾರವಿಲ್ಲದ್ದಾಗಿಯೂ ಇರುವದು; ಗುಣಗಳಿಂದ ಕೂಡಿಯೂ ಇರುವದು, ಗುಣಗಳಿಲ್ಲದ್ದಾಗಿಯೂ ಇರುವದು. ಹೀಗೆಂದು ವೇದಾಂತಗಳ ಡಂಗುರವು.

೩೩. ಶಾಸ್ತ್ರದಲ್ಲಿ ವಿಧಿಸಿದ ಕರ್ಮಗಳನ್ನು ಮಾಡುವದರಿಂದ ದ್ವಿಜನೆನಿಸುತ್ತಾನೆ; ವೇದವನ್ನು ಅಧ್ಯಯನಮಾಡುವದರಿಂದ ವಿಪ್ರನೆನಿಸುತ್ತಾನೆ; ಇದರಂತೆ ಬ್ರಹ್ಮವನ್ನು ಅರಿತುಕೊಳ್ಳುವದರಿಂದ ಬ್ರಾಹ್ಮಣನೆನಿಸುತ್ತಾನೆ. ಹೀಗೆಂದು ವೇದಾಂತಗಳ ಡಂಗುರವು.

೩೪. ಬ್ರಹ್ಮವು ಎಲ್ಲದರ ರೂಪದಲ್ಲಿಯೂ ತೋರುತ್ತಿರುವದು, ಎಲ್ಲವೂ ಬ್ರಹ್ಮಸ್ವರೂಪವಾಗಿಯೇ ಇರುವದು. ಕಾರ್ಯವು ಕಾರಣಕ್ಕಿಂತ ಬೇರೆಯಲ್ಲವಷ್ಟೆ? ಹೀಗೆಂದು ವೇದಾಂತಗಳ ಡಂಗುರವು.

೩೫. ಇರವು, ತೋರಿಕೆ, ಬೇಕಾಗಿರುವಿಕೆ- ಇವು ಮೂರೂ ಎಲ್ಲಾ ವಸ್ತುಗಳಲ್ಲಿಯೂ ತೋರುತ್ತಿರುವವು; ಆದ್ದರಿಂದ ಎಲ್ಲವೂ ಬ್ರಹ್ಮಮಯವಾಗಿರುವದು. ಹೀಗೆಂದು ವೇದಾಂತಗಳ ಡಂಗುರವು.

೩೬. ಗಡಿಗೆ, ಗೋಡೆ- ಮುಂತಾದದ್ದೆಲ್ಲವೂ ಬರಿಯ ಮಣ್ಣೇ ಅಲ್ಲವೆ? ಇದರಂತೆ ಜಗತ್ತೆಲ್ಲವೂ ಬ್ರಹ್ಮವೇ. ಹೀಗೆಂದು ವೇದಾಂತಗಳ ಡಂಗುರವು.

೩೭. ಯಾವದಕ್ಕೆ ಮೂರು ಅವಸ್ಥೆಗಳೂ ಆಟದ ಬಯಲಾಗಿರುವವೋ ಅದನ್ನೇ ಬ್ರಹ್ಮವೆಂದು ತಿಳಿಯಬೇಕು. ಹೀಗೆಂದು ವೇದಾಂತಗಳ ಡಂಗುರವು.

೩೮. ಯಾವದು ಮೊದಲಿರುವದಿಲ್ಲವೋ ಯಾವದು ಕೊನೆಯಲ್ಲಿಯೂ ಇಲ್ಲವೋ, ಅದು ನಡುವೆ ತೋರಿಕೊಂಡರೂ ಮಿಥ್ಯೆಯೇ; ಆದ್ದರಿಂದ ಜಗತ್ತೆಲ್ಲವೂ ಮಿಥ್ಯೆಯೇ. ಹೀಗೆಂದು ವೇದಾಂತಗಳ ಡಂಗುರವು.

೩೯. ಯಾವದು ಮೊದಲೂ ಇರುವದೋ ಯಾವದು ಕೊನೆಯಲ್ಲಿಯೂ ಇರುವದೋ ಯಾವದು ನಡುವೆಯೂ ತಾನೇ ತೋರಿಕೊಳ್ಳುತ್ತಿರುವದೋ- ಈ ಬ್ರಹ್ಮವೊಂದೇ ಸತ್ಯವು. ಹೀಗೆಂದು ವೇದಾಂತಗಳ ಡಂಗುರವು.

೪೦. ಧರ್ಮ, ಅರ್ಥ, ಕಾಮ- ಎಂಬ ಮೂರು ಪುರುಷಾರ್ಥಗಳಲ್ಲಿಯೇ ಮನಸ್ಸಿಟ್ಟವರು ನಿಜವಾಗಿ ಪಶುಗಳೇ. ಮೋಕ್ಷವನ್ನು ಬಯಸುವಾತನೇ ಪುರುಷಶ್ರೇಷ್ಠನು. ಹೀಗೆಂದು ವೇದಾಂತಗಳ ಡಂಗುರವು.

೪೧. (ಹಸಿವುಬಾಯಾರಿಕೆ, ಶೋಕಮೋಹ, ಮುಪ್ಪುಸಾವು- ಎಂಬ) ಆರು ಊರ್ಮಿಗಳನ್ನು ನಾಶಮಾಡಿ, (ಮಕ್ಕಳು, ಹೆಂಡತಿ, ಹಣ- ಎಂಬ) ಮೂರು ಏಷಣೆಗಳನ್ನು ಬಿಟ್ಟು, (ಕರ್ತೃತ್ವಭೋಕ್ತೃತ್ವಗಳೆಂಬ) ಎರಡು ಅಭಿಮಾನಗಳನ್ನು ಸೀಳಿ, (ಬ್ರಹ್ಮಾತ್ಮ ತತ್ತ್ವವೆಂಬ) ಒಂದನ್ನು ತಿಳಿದರೆ ಮೋಕ್ಷವನ್ನು ಹೊಂದುತ್ತಾನೆ.

೪೨. (ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ- ಎಂಬ) ಅರಿ ಷಡ್ವರ್ಗವನ್ನು ಬಿಟ್ಟು, (ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ- ಎಂಬ) ಐದು ಕೋಶಗಳನ್ನೂ ಬೇರ್ಪಡಿಸಿಕೊಂಡು, ಮೊದಲೇ (ವಿವೇಕ, ವೈರಾಗ್ಯ, ಶಮಾದಿ, ಮುಮುಕ್ಷುತೆ- ಎಂಬ) ನಾಲ್ಕು ಸಾಧನವನ್ನು ಹೊಂದಿ, (ಜೀವ, ಬ್ರಹ್ಮ- ಎಂಬ) ಎರಡು ಭೇದವನ್ನು ತೊಲಗಿಸಿಕೊಂಡು ಅದ್ವಿತೀಯಬ್ರಹ್ಮಾತ್ಮತತ್ತ್ವವನ್ನೇ ಆಶ್ರಯಿಸಬೇಕು. ಹೀಗೆಂದು ವೇದಾಂತಗಳ ಡಂಗುರವು.

೪೩. ನಾನು ದೇಹವಲ್ಲ, ದೇಹವುಳ್ಳವನೂ ಅಲ್ಲ; ದೇಹಸಾಕ್ಷಿಯು- ಎಂದು ನಿಶ್ಚಯಿಸಿಕೊಂಡರೆ ಆತನು ಹುಟ್ಟುಸಾವುಗಳಿಲ್ಲದವನಾಗುವನು. ಹೀಗೆಂದು ವೇದಾಂತಗಳ ಡಂಗುರವು.

೪೪. ನಾನು ಪ್ರಾಣವಲ್ಲ, ಪ್ರಾಣಸಾಕ್ಷಿಯಾದ ದೇವನು- ಎಂದು ಗೊತ್ತುಪಡಿಸಿಕೊಳ್ಳುವದರಿಂದ ಹಸಿವೂ ಬಾಯಾರಿಕೆಗಳೂ ಇಲ್ಲವಾಗುವವು. ಹೀಗೆಂದು ವೇದಾಂತಗಳ ಡಂಗುರವು.

೪೫. ನಾನು ಮನಸ್ಸಲ್ಲ, ಮನಸ್ಸಿಗೂ ಸಾಕ್ಷಿಯಾದ ದೇವನು- ಎಂದು ಗೊತ್ತುಪಡಿಸಿಕೊಳ್ಳುವದರಿಂದ ಶೋಕ, ಮೋಹ- ಇವುಗಳು ತೊಲಗುವವು. ಹೀಗೆಂದು ವೇದಾಂತಗಳ ಡಂಗುರವು.

೪೬. ನಾನು ಬುದ್ಧಿಯಲ್ಲ, ಬುದ್ಧಿಗೂ ಸಾಕ್ಷಿಯಾದ ದೇವನು- ಎಂದು ಗೊತ್ತುಪಡಿಸಿಕೊಳ್ಳುವದರಿಂದ ಕರ್ತೃತ್ವವು ನೀಗಿಹೋಗುವದು. ಹೀಗೆಂದು ವೇದಾಂತಗಳ ಡಂಗುರವು.

೪೭. ನಾನು ಅಜ್ಞಾನವಲ್ಲ, ಅಜ್ಞಾನಕ್ಕೂ ಸಾಕ್ಷಿಯಾದ ದೇವನು- ಎಂದು ಗೊತ್ತುಪಡಿಸಿಕೊಳ್ಳುವದರಿಂದ ಎಲ್ಲಾ ಅನರ್ಥಗಳೂ ತೊಲಗುವವು. ಹೀಗೆಂದು ವೇದಾಂತಗಳ ಡಂಗುರವು.

೪೮. ಈ ರೀತಿಯಲ್ಲಿ ನಾನು ಸಾಕ್ಷಿಯು ಎಂಬುದನ್ನು ಮತ್ತೆ ಮತ್ತೆ ವಿಂಗಡಿಸಿಕೊಂಡು ಯಾವಾತನು ಅರಿತುಕೊಳ್ಳುವನೋ ಆತನೇ ಮುಕ್ತನು, ಆತನೇ ವಿದ್ವಾಂಸನು. ಹೀಗೆಂದು ವೇದಾಂತಗಳ ಡಂಗುರವು.

೪೯. ನಾನು ಮಾಯೆಯಲ್ಲ, ಅದರ ಕಾರ್ಯವೂ ಅಲ್ಲ; ಅದಕ್ಕೂ ಸಾಕ್ಷಿಯಾಗಿರುವ ಪರಮಾತ್ಮನೇ ನಾನು- ಎಂದು ಒಂದು ಸಂದೇಹವೂ ಇಲ್ಲದಂತೆ ಅರಿತುಕೊಳ್ಳುವದರಿಂದ ಮುಕ್ತಿಯಾಗುವದು. ಹೀಗೆಂದು ವೇದಾಂತಗಳ ಡಂಗುರವು.

೫೦. ನಾನು ಯಾವದೂ ಅಲ್ಲ, ನಾನು ಎಲ್ಲವೂ ಅಹುದು, ಎಲ್ಲವೂ ನನ್ನದೇ- ಎಂದು ತತ್ತ್ವವನ್ನು ಸ್ಫುಟವಾಗಿ ಅರಿತುಕೊಂಡರೆ ದುಃಖವೆಲ್ಲಿಯದು? ಹೀಗೆಂದು ವೇದಾಂತಗಳ ಡಂಗುರವು.

೫೧. ದೇಹವೇ ಮುಂತಾದ ಐದು ಕೋಶಗಳಲ್ಲಿ ಯಾವ ಸತ್ತೆಯು (ಇರವು) ತೋರುತ್ತಲಿರುವದೋ ಆ ಸತ್ತೆಯು ಆತ್ಮನೇ, ಸಂದೇಹವಿಲ್ಲ. ಹೀಗೆಂದು ವೇದಾಂತಗಳ ಡಂಗುರವು.

೫೨. ದೇಹವೇ ಮುಂತಾದ ಐದು ಕೋಶಗಳಲ್ಲಿ ಯಾವ ತೋರಿಕೆಯು ಅನುಭವಕ್ಕೆ ಬರುತ್ತಿರುವದೋ ಆ ತೋರಿಕೆಯು ಆತ್ಮನೇ, ಮತ್ತೊಂದಲ್ಲ. ಹೀಗೆಂದು ವೇದಾಂತಗಳ ಡಂಗುರವು.

೫೩. ದೇಹವೇ ಮುಂತಾದ ಐದು ಕೋಶಗಳಲ್ಲಿ ಯಾವ ಪ್ರೇಮವು ಅನುಭವಕ್ಕೆ ಬರುತ್ತಿರುವದೋ ಆ ಪ್ರೇಮವು ಕೂಟಸ್ಥನಾದ ಆತ್ಮನೇ. ಹೀಗೆಂದು ವೇದಾಂತಗಳ ಡಂಗುರವು.

೫೪. ಆಕಾಶವೇ ಮುಂತಾದ ಐದು ಭೂತಗಳಲ್ಲಿ ಯಾವ ಸತ್ತೆಯು ತೋರುತ್ತಲಿರುವದೋ ಆ ಸತ್ತೆಯು ಪರಬ್ರಹ್ಮವೇ. ಹೀಗೆಂದು ವೇದಾಂತಗಳ ಡಂಗುರವು.

೫೫. ಆಕಾಶವೇ ಮುಂತಾದ ಐದು ಭೂತಗಳಲ್ಲಿ ಯಾವ ಜ್ಞಾನ ಅನುಭವದಲ್ಲಿ ತೋರುತ್ತಲಿರುವದೋ (ಯಾವ ಜ್ಞಾನದಿಂದ ಅವು ತೋರುತ್ತಲಿರುವವೋ) ಆ ಜ್ಞಾನವು ಪರಬ್ರಹ್ಮವೇ, ಮತ್ತೊಂದಲ್ಲ. ಹೀಗೆಂದು ವೇದಾಂತಗಳ ಡಂಗುರವು

೫೬. ಆಕಾಶವೇ ಮುಂತಾದ ಐದು ಭೂತಗಳಲ್ಲಿ [illegible]ಪ್ರೇಮವು ಅನುಭವದಲ್ಲಿ ತೋರುತ್ತಲಿರುವದೋ [illegible] ಡಂಗುರವು.

೫೭. ದೇಹವೇ ಮುಂತಾದ ಕೋಶಗಳಲ್ಲಿ ಯಾವ ಸತ್ತೆಯಿರುವದೋ ಅದೇ ಆಕಾಶವೇ ಮುಂತಾದ ಭೂತಗಳಲ್ಲಿರುವ ಸತ್ತೆಯು; ಅವೆರಡೂ ಬೇರೆ ಬೇರೆ ಎಂಬುದಕ್ಕೆ ಯಾವ ಪ್ರಮಾಣವೂ ಇಲ್ಲ. ಹೀಗೆಂದು ವೇದಾಂತಗಳ ಡಂಗುರವು.

೫೮. ದೇಹವೇ ಮುಂತಾದ ಕೋಶಗಳಲ್ಲಿ ಯಾವ ತೋರಿಕೆಯಿರುವದೋ ಅದೇ ಆಕಾಶವೇ ಮುಂತಾದ ಭೂತಗಳಲ್ಲಿರುವ ತೋರಿಕೆಯು; ಅವೆರಡೂ ಬೇರೆ ಬೇರೆ ಎನ್ನುವದಕ್ಕೆ ಯಾವ ಪ್ರಮಾಣವೂ ಇಲ್ಲ. ಹೀಗೆಂದು ವೇದಾಂತಗಳ ಡಂಗುರವು.

೫೯. ದೇಹವೇ ಮುಂತಾದ ಕೋಶಗಳಲ್ಲಿ ಯಾವ ಪ್ರೇಮವಿರುವದೋ ಅದೇ ಆಕಾಶವೇ ಮುಂತಾದ ಭೂತಗಳಲ್ಲಿಯೂ ಇರುವ ಪ್ರೇಮವು; ಅವೆರಡೂ ಬೇರೆ ಬೇರೆ ಎನ್ನುವದಕ್ಕೆ ಯಾವ ಪ್ರಮಾಣವೂ ಇಲ್ಲ. ಹೀಗೆಂದು ವೇದಾಂತಗಳ ಡಂಗುರವು.

೬೦. ಆತ್ಮನು ಸಚ್ಚಿದಾನಂದರೂಪನಾಗಿರುವದರಿಂದ ಬ್ರಹ್ಮವೇ, ಸಂಶಯವಿಲ್ಲ. ಶ್ರುತಿಯಿಂದ ಉಂಟಾಗುವ ಯಥಾರ್ಥಜ್ಞಾನವನ್ನು ಮನದಂದರೆ ಈ ಅರ್ಥವು ಗೊತ್ತಾಗುವದು. ಹೀಗೆಂದು ವೇದಾಂತಗಳ ಡಂಗುರವು.

೬೧. ಜೀವನಿಗೂ ಬ್ರಹ್ಮಕ್ಕೂ ಇರವಿನಿಂದ ಭೇದವಿಲ್ಲ; ಏಕೆಂದರೆ ಸತ್ತೆಯು ಬೇರೆ ಬೇರೆ ಎನ್ನುವುದಕ್ಕೆ ಪ್ರಮಾಣವಿಲ್ಲ. ಹೀಗೆಂದು ವೇದಾಂತಗಳ ಡಂಗುರವು.

೬೨. ಜೀವನಿಗೂ ಬ್ರಹ್ಮಕ್ಕೂ ತೋರಿಕೆಯಿಂದ ಭೇದವಿಲ್ಲ; ಏಕೆಂದರೆ ತೋರಿಕೆಯು ಬೇರೆ ಬೇರೆ ಎನ್ನುವದಕ್ಕೆ ಪ್ರಮಾಣವಿಲ್ಲ. ಹೀಗೆಂದು ವೇದಾಂತಗಳ ಡಂಗುರವು.

೬೩. ಜೀವನಿಗೂ ಬ್ರಹ್ಮಕ್ಕೂ ಪ್ರಿಯವಾಗಿರುವದರಲ್ಲಿಯೂ ಭೇದವಿಲ್ಲ: ಏಕೆಂದರೆ ಪ್ರಿಯವಾಗಿರುವದು ಬೇರೆ ಬೇರೆ ಎನ್ನುವದಕ್ಕೆ ಪ್ರಮಾಣವಿಲ್ಲ.

೬೪. ಜೀವನಿಗೂ ಬ್ರಹ್ಮಕ್ಕೂ ನಾಮರೂಪಗಳಿಂದ ಭೇದವಿಲ್ಲ; ಏಕೆಂದರೆ ನಾಮವೂ ರೂಪವೂ ಮಿಥ್ಯೆಯಾಗಿರುವವು. ಹೀಗೆಂದು ವೇದಾಂತಗಳ ಡಂಗುರವು.

೬೫. ನಾಮರೂಪಗಳು ಒಂದೇ ಆಗಿರುವದಿಲ್ಲ, ಏಕೆಂದರೆ ಎಲ್ಲೆಲ್ಲಿಯೂ ಅವು ಬೇರ್ಪಡುತ್ತಿರುವವು. ...ದ್ದರಿಂದ ಯಾರಿಗೂ ನಾಮರೂಪಗಳಿರುವದಿಲ್ಲ. ಹೀಗೆಂದು ವೇದಾಂತಗಳ ಡಂಗುರವು.

೬೬. ಜೀವನಿಗೂ ಬ್ರಹ್ಮಕ್ಕೂ ಪಿಂಡ (ಶರೀರ), ಬ್ರಹ್ಮಾಂಡ (ಜಗತ್ತು)- ಎಂಬ (ಉಪಾಧಿಗಳಿಂದ) ಭೇದವಿಲ್ಲ ; ಏಕೆಂದರೆ ವ್ಯಷ್ಟಿ(ಬಿಡಿ)ಯೂ ಸಮಷ್ಟಿಯೂ (ಒಟ್ಟು) ಒಂದೇ. ಹೀಗೆಂದು ವೇದಾಂತಗಳ ಡಂಗುರವು.

೬೭. ಬ್ರಹ್ಮವು ಸತ್ಯವು, ಜಗತ್ತು ಮಿಥ್ಯೆ : ಜೀವನು ಬ್ರಹ್ಮವೇ, ಬೇರೆಯಲ್ಲ ; ಇದನ್ನು ತಿಳಿದವನು ಜೀವನ್ಮುಕ್ತನು(ಬದುಕಿರುವಾಗಲೇ ಸಂಸಾರದ ಕಟ್ಟನ್ನು ಕಳಚಿಕೊಂಡವನು). ಹೀಗೆಂದು ವೇದಾಂತಗಳ ಡಂಗುರವು.

೬೮. ಯಾವದಕ್ಕೂ ನಾಮರೂಪವಿಲ್ಲ ; ಎಲ್ಲವೂ ಸದ್ರೂಪವಾಗಿಯೂ ಚಿದ್ರೂಪವಾಗಿಯೂ ಪ್ರಿಯವಾಗಿಯೂ ಇರುವದು. ಭೇದವೆಲ್ಲಿಯದು, ಬಂಧವೆಲ್ಲಿಯದು ? ಹೀಗೆಂದು ವೇದಾಂತಗಳ ಡಂಗುರವು.

೬೯. ಈ (ನಾಮರೂಪಾತ್ಮಕವಾದ) ಲೋಕವು ಸತ್ಯವಲ್ಲ, ಏಕೆಂದರೆ ಬ್ರಹ್ಮಚಾರಿ, ವ್ಯಭಿಚಾರಿ– ಎಂಬುದೇ ಮುಂತಾದ ನಾಮಾದಿಗಳು ಬೇರ್ಪಡುತ್ತಲೇ ಇರುವವು. ಹೀಗೆಂದು ವೇದಾಂತಗಳ ಡಂಗುರವು.

೭೦. ತಿಳಿದವರು ನಾಮರೂಪವಾಗಿ ಕಾಣುವ ಪ್ರಪಂಚವನ್ನು ಇಂದ್ರಜಾಲವೆನ್ನುವರು ; ಏಕೆಂದರೆ ನಿಜವಾಗಿ ನೋಡಿದರೆ ನಾಮವೂ ಇಲ್ಲ, ರೂಪವೂ ಇಲ್ಲ. ಹೀಗೆಂದು ವೇದಾಂತಗಳ ಡಂಗುರವು.

೭೧. ಅಭೇದವನ್ನು (ಜೀವ, ಬ್ರಹ್ಮ ಎಂದೆರಡಿಲ್ಲ, ಬ್ರಹ್ಮವೊಂದೇ ಎಂಬುದನ್ನು) ಕಂಡುಕೊಳ್ಳುವದು ಮೋಕ್ಷವು, ಭೇದವನ್ನು ಕಾಣುವದೇ ಸಂಸಾರವು ; ಇದೇ ಸರ್ವವೇದಾಂತಗಳ ಸಿದ್ಧಾಂತವು. ಹೀಗೆಂದು ವೇದಾಂತಗಳ ಡಂಗುರವು.

೭೨. ಬರಿಯ ಮತಾಭಿಮಾನದಿಂದ, ಅಥವಾ ಬರಿಯ (ವೇದಾಂತದ) ಮಾತು (ಸಾಧು) ವೇಷ- ಇವುಗಳನ್ನು ಇಟ್ಟುಕೊಂಡಿದ್ದ ಮಾತ್ರದಿಂದ, ಆತ್ಮಜ್ಞಾನವಿಲ್ಲದೆ ಎಂದಿಗೂ ಮುಕ್ತಿಯಾಗುವದಿಲ್ಲ. ಹೀಗೆಂದು ವೇದಾಂತಗಳ ಡಂಗುರವು.

೭೩. ಕಾಮ್ಯಕರ್ಮಗಳಿಂದಲೂ ಪ್ರತಿಷಿದ್ಧಕರ್ಮಗಳಿಂದಲೂ ಮೋಕ್ಷವಾಸನೆಯುಂಟಾಗುವದಿಲ್ಲ ; ಅದು ಈಶ್ವರನ ಅನುಗ್ರಹದಿಂದಲೇ ಆಗುವದು. ಹೀಗೆಂದು ವೇದಾಂತಗಳ ಡಂಗುರವು.

೭೪. ಇದನ್ನು ಅರಿಯದಿದ್ದರೆ ಜನ್ಮವೇ ಹಾಳಾದಂತೆ, ಅರಿತುಕೊಂಡರೆ ಜನ್ಮವು ಸಾರ್ಥಕವಾದಂತೆ ; ಅರಿತವನಿಗೆ ಆತ್ಮನು ದೂರದಲ್ಲಿರುವದಿಲ್ಲ. ಹೀಗೆಂದು ವೇದಾಂತಗಳ ಡಂಗುರವು.

೭೫. ಹತ್ತನೆಯವನನ್ನು ತಿಳಿದುಕೊಳ್ಳುವದರಲ್ಲಿ ಹೇಗೆ ಯಾವ ಆಯಾಸವೂ ಇಲ್ಲವೋ ಅದರಂತೆಯೇ ತಾನು ಬ್ರಹ್ಮಾತ್ಮನೆಂಬುದನ್ನು ತಿಳಿದುಕೊಳ್ಳುವದರಲ್ಲಿಯೂ (ಯಾವ ಆಯಾಸವೂ ಇರುವದಿಲ್ಲ). ಹೀಗೆಂದು ವೇದಾಂತಗಳ ಡಂಗುರವು.

೭೬. ಉಪಾಧಿಯ ದೋಷಗಳನ್ನು ಬಿಟ್ಟು ಹೇಗೆ ವಿಷಯಗಳನ್ನು ಗ್ರಹಿಸುತ್ತಾರೋ, ಇದರಂತೆ ಕಾಣಬರುವ ವಿಷಯವನ್ನು ಕೈಬಿಟ್ಟು ಬ್ರಹ್ಮಸ್ವರೂಪವನ್ನು ಅರಿಯಬೇಕು. ಹೀಗೆಂದು ವೇದಾಂತಗಳ ಡಂಗುರವು.

೭೭. ವಿಷಯವನ್ನೇ ಗ್ರಹಿಸುತ್ತಿರುವ ಜನರಿಗೆ ಸಿಕ್ಕುವ ಸುಖವೂ ಸ್ವಲ್ಪ. ಅದೂ ಬಹು ಕ್ಲೇಶದಿಂದ ಸಿಕ್ಕತಕ್ಕದ್ದು. ಬ್ರಹ್ಮನಿಷ್ಠರಿಗೆ ದೊರಕುವ ಸುಖವು ಅನಂತವಾಗಿರುವದು. ಹೀಗೆಂದು ವೇದಾಂತಗಳ ಡಂಗುರವು.

೭೮. ಹಣ, ಹಣವನ್ನು ಕೊಡುವವರು, ಮಕ್ಕಳು, ಹೆಂಡತಿ, ಮನೆ, ಅಣ್ಣತಮ್ಮಂದಿರು– ಇವರೆಲ್ಲರೂ ನಿಶ್ಚಯವಾಗಿ ಪ್ರಾಣವನ್ನು ಅಪಹರಿಸುವವರೇ, ಅವರಿಂದ ದುಃಖವೇ. ಹೀಗೆಂದು ವೇದಾಂತಗಳ ಡಂಗುರವು.

೭೯. ನಿದ್ರೆಯಿಂದೆದ್ದು ಮತ್ತೆ ನಿದ್ರೆ ಹತ್ತುವವರೆಗೂ ಬ್ರಹ್ಮವೊಂದನ್ನೇ ಚಿಂತಿಸಬೇಕು, ಏಕೆಂದರೆ ಜನರಿಗೆ ಮೃತ್ಯುವು ದೂರದಲ್ಲಿಲ್ಲ. ಹೀಗೆಂದು ವೇದಾಂತಗಳ ಡಂಗುರವು.

೮೦. ಐದು ಕೋಶಗಳೂ ಮಾಯಾರೂಪವಾಗಿರುವವು, ಅನರ್ಥರೂಪವಾಗಿರುವವು– ಎಂಬುದೇ ಯುಕ್ತವು. ಇವುಗಳೆಲ್ಲಕ್ಕೂ ಸಾಕ್ಷಿಯಾಗಿರುವ ಆತ್ಮನೇ ಬ್ರಹ್ಮವೆಂದು ಅರಿಯುವದರಿಂದ (ಇದು ತೋರುವದು). ಹೀಗೆಂದು ವೇದಾಂತಗಳ ಡಂಗುರವು.

೮೧. ಹತ್ತನೆಯವನನ್ನು ಅರಿತುಕೊಳ್ಳುವದರಿಂದ ಒಂಬತ್ತುಮಂದಿಯನ್ನೇ ತಿಳಿದಿದ್ದವನಿಗೆ ಹೇಗೆ ಸುಖವಾಯಿತೋ, ಸದ್ರೂಪವಾದ ಬ್ರಹ್ಮವನ್ನು ಪಡೆದರೆ ಇದರಂತೆ ಜೀವನಿಗೆ ಸುಖವಾಗುವದು. ಹೀಗೆಂದು ವೇದಾಂತಗಳ ಡಂಗುರವು.

೮೨. ಒಂಬತ್ತು ಜನರಿಗಿಂತಲೂ ಬೇರೆಯಾದ ಹತ್ತನೆಯವನೂ ಇದ್ದನು ; ಆದರೆ ಆ ಇನ್ನೊಬ್ಬನು ಒಂಬತ್ತು ಜನರನ್ನು ಮಾತ್ರ ಅರಿತಿದ್ದವನಿಗೆ ತಿಳಿಯದೇ ಇರಲಿಲ್ಲ. ಇದರಂತೆಯೇ ವಿಷಯಗಳಿಗಿಂತ ಬೇರೆಯಾದ ಪ್ರತ್ಯಗಾತ್ಮನು ಇದ್ದೇ ಇರುವನು, ಆದರೆ ಆ ಬೇರೆಯಾಗಿರುವ ಆತ್ಮನನ್ನು ಮಾತ್ರ ಮೂಢನು ಅರಿಯನು. ಆತನನ್ನು ಅರಿತುಕೊಳ್ಳುವದರಿಂದ ದೃಷ್ಟಾಂತದಲ್ಲಿ ಆದಂತೆಯೇ ದುಃಖವಿಮೋಚನೆಯಾಗುವದು. ಹೀಗೆಂದು ವೇದಾಂತಗಳ ಡಂಗುರವು.

೮೩. (ದೃಷ್ಟಾಂತದಲ್ಲಿ ಹೇಳಿದ) ಒಂಬತ್ತು ಜನರಂತೆ ಇರುವ ಒಂಬತ್ತು ಉಪಾಧಿಗಳನ್ನು ಇಂಥ ಒಂಬತ್ತೇ ಎಂದು ತಿಳಿದು, ಅವುಗಳನ್ನು ಮಿಥ್ಯವೆಂದೂ ತಿಳಿದು ಉಳಿದ ಕೂಟಸ್ಥಾತ್ಮನ ವಿಷಯದಲ್ಲಿ ಮೌನವೇ ಯುಕ್ತವು. ಹೀಗೆಂದು ವೇದಾಂತಗಳ ಡಂಗುರವು.

೮೪. (ಜ್ಞಾನಿಯು) ಪರಬ್ರಹ್ಮವಾದ ತನ್ನಲ್ಲಿ ಜಗತ್ತೆಲ್ಲವನ್ನೂ ಲಯಗೊಳಿಸಿ ಅದ್ವೈತಾತ್ಮನನ್ನು ಗಾನಮಾಡುತ್ತಾ ಇರುವನು. ಹೀಗೆಂದು ವೇದಾಂತಗಳ ಡಂಗುರವು.

೮೫. ಅನ್ವಯವ್ಯತಿರೇಕಗಳಿಂದ ಪ್ರಪಂಚದ ಆರೋಪವನ್ನೂ ಅಪವಾದವನ್ನೂ ಚಿಂತನೆಮಾಡಿದರೆ ತತ್ತ್ವವು ಉಳಿದುಕೊಳ್ಳುತ್ತದೆ. ಹೀಗೆಂದು ವೇದಾಂತಗಳ ಡಂಗುರವು.

೮೬. ಎಲ್ಲಾ ಜೀವನಿಗೂ ನಾಮರೂಪಗಳ ಅಭಿಮಾನವೇ ಸಂಸಾರವು, ತಾನು ಸಚ್ಚಿದಾನಂದನೆಂಬ ದೃಷ್ಟಿಯೇ ಮೋಕ್ಷವು. ಹೀಗೆಂದು ವೇದಾಂತಗಳ ಡಂಗುರವು.

೮೭. ಸಚ್ಚಿದಾನಂದಸ್ವರೂಪವು ಸತ್ಯವೆಂದೂ ನಾಮರೂಪಗಳು ಮಿಥ್ಯೆಯೆಂದೂ ತಿಳಿದುಕೊಂಡರೆ ಇನ್ನು ತಿಳಿದುಕೊಳ್ಳಬೇಕಾದದ್ದು ಏನಿದೆ? ಹೀಗೆಂದು ವೇದಾಂತಗಳ ಡಂಗುರವು.

೮೮. (ಮತ್ತೊಂದರ ಆಲಂಬನೆಯಿಂದಲೇ ಇರುವಿಕೆಯುಳ್ಳ ಜಗತ್ತಿನೊಡನೆ ಕೂಡಿರುವದರಿಂದ) ಸಾಲಂಬನವೂ ತಾನು ಮತ್ತೊಂದರ ಆಲಂಬನೆಯಿಲ್ಲದ್ದೂ ಆಗಿರುವ, ಎಲ್ಲಾ ಆಲಂಬನೆಗಳಿಗೂ ಆಲಂಬನೆಯಾಗಿರುವ, ಬ್ರಹ್ಮವನ್ನು ಆಶ್ರಯಿಸಿದರೆ ಎಲ್ಲವನ್ನೂ ಆಶ್ರಯಿಸಿದಂತಾಯಿತು. ಹೀಗೆಂದು ವೇದಾಂತಗಳ ಡಂಗುರವು.

೮೯. ಏನೂ ಮಾಡತಕ್ಕದ್ದೂ ಇಲ್ಲ, ಏನೂ ತಿಳಿಯತಕ್ಕದ್ದೂ ಇಲ್ಲ ; ಎಲ್ಲವೂ ಬ್ರಹ್ಮವೇ ಎಂದು ಭಾವಿಸುತ್ತಾ ಹೇಗೆ ಸುಖವೋ ಹಾಗೆ ಇರಬಹುದು. ಹೀಗೆಂದು ವೇದಾಂತಗಳ ಡಂಗುರವು.

೯೦. ಜ್ಞಾನಿಯಾಗಲಿ ಮಿಕ್ಕ ಜನರಾಗಲಿ ನಿಶ್ಚಯವಾಗಿಯೂ ತಮ್ಮ ತಮ್ಮ ಕರ್ಮದ ಪಾಪಕ್ಕೆ ವಶರಾಗಿರುವರು. ಆದರೆ ಜ್ಞಾನಿಯು ಸುಖವಾಗಿ ಕಾಲವನ್ನು ಕಳೆಯುತ್ತಿರುವನು. ಹೀಗೆಂದು ವೇದಾಂತಗಳ ಡಂಗುರವು.

೯೧. ತಾನು ಪುಣ್ಯವನ್ನು ಮಾಡಲಿಲ್ಲವೆಂಬ ಬುದ್ಧಿಯೂ ಪಾಪವನ್ನು ಮಾಡಿದೆನೆಂಬ ಬುದ್ಧಿಯೂ ಜ್ಞಾನಿಯನ್ನು ತಾಪಗೊಳಿಸುವದಿಲ್ಲ. ಏಕೆಂದರೆ ಅವನು ಎಲ್ಲವೂ ಪರಮಾತ್ಮನೇ ಎಂದು ತಿಳಿದುಕೊಂಡಿರುವನು. ಹೀಗೆಂದು ವೇದಾಂತಗಳ ಡಂಗುರವು.

೯೨. ಕರ್ಮವು ಚಿದಾಭಾಸನನ್ನು ಮುಟ್ಟಲಾರದು ; ಮಿಥ್ಯಾರೂಪವಾದ ಉಪಾಧಿಯನ್ನೂ ಮುಟ್ಟಲಾರದು ; ಅತ್ಯಂತ ನಿರ್ಮಲವಾಗಿರುವ ಅಧಿಷ್ಠಾನಚೈತನ್ಯವನ್ನು ಹೇಗೆ ಮುಟ್ಟೀತು ? ಹೀಗೆಂದು ವೇದಾಂತಗಳ ಡಂಗುರವು.

೯೩. ಆಹಾ ! ಇನ್ನು ನಮಗೆ ಮೋಹವಿಲ್ಲ. 'ಆತ್ಮನೇ ನಿರ್ಭಯವಾದ ಬ್ರಹ್ಮವು'- ಎಂಬ ಶ್ರುತಿಯ ನಗಾರಿಯ ಶಬ್ದವು ಈಗಲೂ ಕಿವಿಗಿಂಪಾಗಿ ಕೇಳಬರುತ್ತಲೇ ಇದೆ.

೯೪. ವೇದಾಂತವೆಂಬ ಭೇರಿಯ ಝುಂಕಾರವು ಪ್ರತಿವಾದಿಗಳಿಗೆ ಭಯಂಕರವಾಗಿರುವದು. ಶ್ರೀಮದ್ದಕ್ಷಿಣಾಮೂರ್ತಿಯ ಅನುಗ್ರಹದಿಂದ ಬ್ರಾಹ್ಮಣರು ಅದನ್ನು ಕೇಳಲಿ.

೫೦೦—೧೨೧ ೩೩ ಅಧ್ಯಾತ್ಮ ಪ್ರಕಾಶಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಧ್ಯಾತ್ಮವಿದ್ಯೆಯ ಚೊಕ್ಕಸವಾದ

ಉಪನಿಷತ್ತುಗಳು

ಇವುಗಳನ್ನೆಲ್ಲ ಸಂಸ್ಕೃತಮೂಲ, ಅರ್ಥ, ಶಾಂಕರಭಾಷ್ಯಾನುವಾದ, ಅಡಿಯಲ್ಲಿ ಟಿಪ್ಪಣಿ, ಕೊನೆಯಲ್ಲಿ ಸಾರಾಂಶ, ಕಷ್ಟಪದಗಳ ಸಾರ್ಥ ಅಕ್ಷರಾನುಕ್ರಮಣಿಕೆ— ಹೀಗೆ ವಿಂಗಡಿಸಿದೆ. ಆಚಾರ್ಯರ ಭಾವಚಿತ್ರವಿದೆ.

೫. **ಈಶಾವಾಸ್ಯೋಪನಿಷತ್ತು**— ಇದರಲ್ಲಿ ಪ್ರವೃತ್ತಿ, ನಿವೃತ್ತಿ- ಎಂಬ ವೇದೋಕ್ತಧರ್ಮಗಳ ವಿವೇಚನೆಯನ್ನು ಮಾಡಿದೆ.

ಬೆಲೆ: ೦—೫—೦ 'ಅ. ಪ್ರ.'ದ ಚಂದಾದಾರರಿಗೆ: ೦—೪—೬

೬. **ಕಠೋಪನಿಷತ್ತು**— ಆತ್ಮನು ಸಂಸಾರಿಯಾಗಿಯೂ ಒಂದೊಂದು ಶರೀರದಲ್ಲಿಯೂ ಬೇರೆಬೇರೆಯಾಗಿಯೂ ಇರುವಂತೆ ಅವಿದ್ಯೆಯ ಕಣ್ಣಿಗೆ ಕಾಣುತ್ತಿದ್ದರೂ ನಿಜವಾಗಿ ಅವಿದ್ಯಾಕಾಮಕರ್ಮಗಳಿಗೆ ಕಟ್ಟುಬೀಳದೆ ಅಸಂಸಾರಿಯಾಗಿ ಇರುವನೆಂಬುದನ್ನು ಬಹು ಸರಸವಾಗಿ ವಿವರಿಸಿರುತ್ತದೆ.

ಬೆಲೆ: ೧—೦—೦ 'ಅ.ಪ್ರ.'ದ ಚಂದಾದಾರರಿಗೆ: ೦—೧೫—೦

೭. **ಮುಂಡಕೋಪನಿಷತ್ತು**— ಇದರಲ್ಲಿ ಪರ, ಅಪರ- ಎಂಬ ವಿದ್ಯೆಗಳ ವಿವೇಚನೆಯನ್ನು ಮಾಡಿದೆ; ಆತ್ಮವಿದ್ಯೆಗೆ ಸಾಧನಗಳನ್ನೂ ತಿಳಿಸಿದೆ.

ಬೆಲೆ: ೦—೧೨—೦ 'ಅ.ಪ್ರ.'ದ ಚಂದಾದಾರರಿಗೆ: ೦—೧೧—೦

೮. **ಮಾಂಡೂಕ್ಯೋಪನಿಷತ್ತು**— ಇದು ಎಚ್ಚರ, ಕನಸು, ನಿದ್ದೆ- ಎಂಬ ಮೂರು ಅವಸ್ಥೆಗಳ ಸೋಂಕೂ ಇಲ್ಲದೆ ನಿರ್ಮಲವಾಗಿರುವ ನಮ್ಮೆಲ್ಲರ ಆತ್ಮನ ಸ್ವರೂಪವನ್ನು ಅನುಭವಕ್ಕೆ ತಂದುಕೊಡುತ್ತದೆ. ಶ್ರೀಶಂಕರಾಚಾರ್ಯರ ಪರಮಗುರುಗಳಾದ ಶ್ರೀಗೌಡಪಾದಾಚಾರ್ಯರು ಇದರ ವಿವರಣೆಯ ರೂಪವಾಗಿ ಬರೆದಿರುವ ಆಗಮಪ್ರಕರಣವೆಂಬ ೧ನೆಯ ಭಾಗವೂ ಇದೆ.

ಬೆಲೆ: ೦—೯—೦ 'ಅ.ಪ್ರ.'ದ ಚಂದಾದಾರರಿಗೆ: ೦—೮—೬

೯. **ವೈತಥ್ಯಪ್ರಕರಣ**— ಮಾಂಡೂಕ್ಯಕಾರಿಕೆಯ ೨ನೆಯ ಭಾಗ.

ಬೆಲೆ: ೦—೮—೦ 'ಅ.ಪ್ರ.'ದ ಚಂದಾದಾರರಿಗೆ: ೦—೭—೬

೧೦. **ಅದ್ವೈತಪ್ರಕರಣ**— ಮಾಂಡೂಕ್ಯಕಾರಿಕೆಯ ೩ನೆಯ ಭಾಗ.

ಬೆಲೆ: ೦—೯—೦ 'ಅ.ಪ್ರ.'ದ ಚಂದಾದಾರರಿಗೆ: ೦—೮—೬

'ಅಧ್ಯಾತ್ಮಪ್ರಕಾಶ'ವು ಭಕ್ತಿಜ್ಞಾನವೈರಾಗ್ಯಾದಿಗಳ ವಿಷಯವಾದ ಬರಹಗಳಿಂದ ಕೂಡಿ ತಿಂಗಳಿಗೊಂದು ಸಲ ಹೊರಡುವ ಪತ್ರಿಕೆ.

ಚಂದ: ೨—೦—೦ ಮಾದರಿಯ ಸಂಚಿಕೆಗೆ: ೦—೪—೬

ಅಧ್ಯಾತ್ಮಪ್ರಕಾಶಕಾರ್ಯಾಲಯ, ಬೆಂಗಳೂರು ಸಿಟಿ.

ಶ್ರೀಶಾಂಕರಭಾಷ್ಯಸಮೇತವಾದ

ಬೆಲೆ: ೧-೪-೦ **೧೧. ಭಗವದ್ಗೀತೆ** ಡೆಮ್ಮಿ ಲಪತ್ರ

ಭಗವದ್ಗೀತೆಯನ್ನು ಶ್ಲೋಕ, ಶ್ಲೋಕಾರ್ಥ. ಭಾಷ್ಯದ ಪೂರ ಅರ್ಥ, ಅಡಿಯಲ್ಲಿ ಟಿಪ್ಪಣಿ, ಕೊನೆಯುಲ್ಲಿ ಸಾರಾಂಶ, ಅನುಕ್ರಮಣಿಕೆ, ಬೇರೆ ಬೇರೆ ವ್ಯಾಖ್ಯಾನಕಾರರ ಅಭಿಪ್ರಾಯುಗಳನ್ನೊಳಕೊಂಡ ಪರಿಶಿಷ್ಟ - ಇಷ್ಟು ವಿಷಯುಗಳೊಡನೆ ಅಲ್ಲಲ್ಲಿಗೆ ತಕ್ಕ ಬೇರೆ ಬೇರೆ ಗಾತದ ಅಕ್ಷರಗಳಲ್ಲಿ ಮಿರುಗುವ ಎಕ್ಸೌಂಡ್ ಕಾಗದದ ಮೇಲೆ ಡೆಮ್ಮಿ ಲಪತ್ರದ ಆಕಾರದಲ್ಲಿ ಅಂದವಾಗಿ ಅಚ್ಚುಮಾಡಿಸಿ ಭಾಗಭಾಗವಾಗಿ ಪ್ರಕಟಿಸುತ್ತಿದ್ದೇವೆ. ಈಗಾಗಲೇ ಏಳು ಅಧ್ಯಾಯುಗಳನ್ನೊಳಕೊಂಡ ಎರಡು ಭಾಗಗಳು ಹೊರಕ್ಕೆ ಬಂದಿವೆ; ಇವನ್ನು ನೋಡಿದರೆ ಈ ಗ್ರಂಥದ ಮಿಗಿಲಿರುವ ಹೆಚ್ಚುಗಾರಿಕೆಯು ವಾಚಕರಿಗೆ ತಾನೇ ಮನದಟ್ಟಾಗುವದು.

೧೬೦ ಪುಟಗಳ ಒಂದೊಂದು ಭಾಗಕ್ಕೆ ಬೆಲೆ: ರೂ. ೧-೪-೦

"ಗ್ರಂಥವು ಅನುವಾದವಾಗಿದೆ ಮೂಲವೇ ಆಗಿದೆಯೆಂಬುವಷ್ಟು ಓಜಸ್ವಿಯೂ ಪರಿಣಾಮಕಾರಿಯೂ ಆಗಿದೆ" — ಜಯಕರ್ಣಾಟಕ.

'ಅ. ಪ್ರ.'ದ ಚಂದಾದಾರರಿಗೆ ಒಂದೊಂದು ಭಾಗಕ್ಕೆ ಬೆಲೆ: ೧—೩—೦

ಬೆಲೆ: ೧ ರೂ. ೧೨.ಉಪದೇಶಸಾಹಸ್ರಿ ಪುಟ: ೨೨೬

ಗದ್ಯ ಭಾಗ

ಶ್ರೀಶಂಕರಾಚಾರ್ಯರವರು ಬರೆದಿರುವ ಗಂಭೀರವಿಚಾರಗಳ ಪ್ರಕರಣವಿದು. ಇದರಲ್ಲಿ ಮೂಲದ ಕನ್ನಡ ಅನುವಾದ, ಕ್ಲಿಷ್ಟಪದಗಳ ಅರ್ಥ, ಗ್ರಂಥದ ಆಶಯುವನ್ನೆಲ್ಲ ಹೊರಕ್ಕೆ ತೆಗೆದಿರುವ ವಿಸ್ತಾರವಾದ ಹೊಸ ವಿವರಣೆ, ಆಯಾ ಪ್ರಕರಣದ ಸಾರ, ಗ್ರಂಥದಲ್ಲಿ ಬಂದಿರುವ ಪ್ರಮಾಣವಚನಗಳ ಸ್ಥಾನವನ್ನು ತಿಳಿಸುವ ಪಟ್ಟಿ, ಮುಖ್ಯವಿಷಯುಗಳನ್ನು ಒಕ್ಕಡೆಗೆ ಸಂಗ್ರಹಿಸಿರುವ ದೊಡ್ಡ ಅಕ್ಷರಾನುಕ್ರಮಣಿಕೆ- ಇಷ್ಟು ಇವೆ. ಈ ಗ್ರಂಥವು ಈ ಮಾದರಿಯಲ್ಲಿ ಕನ್ನಡದಲ್ಲಿ ಇದುವರೆಗೆ ಅಚ್ಚಾಗಿಲ್ಲವೆಂಬುದು ಹಾಗಿರಲಿ, ಪ್ರಪಂಚದ ಯಾವ ಭಾಷೆಗೂ ತರ್ಜುಮೆಯಾಗಿಲ್ಲ.

'ಅ. ಪ್ರ.'ದ ಚಂದಾದಾರರಿಗೆ ಬೆಲೆ : ೦—೧೪—೦

ಅರ್ಧ ಕ್ಯಾಲಿಕೊಪ್ರತಿಗೆ: ೧-೬-೦ 'ಅ.ಪ್ರ.'ದ ಚಂದಾದಾರರಿಗೆ: ೧-೪-೦

ಪೂರ ಕ್ಯಾಲಿಕೊಪ್ರತಿಗೆ: ೧-೧೨-೦ 'ಅ.ಪ್ರ.'ದ ಚಂದಾದಾರರಿಗೆ: ೧-೧೦-೦

ಅಧ್ಯಾತ್ಮ ಪ್ರಕಾಶಕಾರ್ಯಾಲಯ, ಬೆಂಗಳೂರು ಸಿಟಿ.

ವೇದಾಂತದ ಕೆಚ್ಚನ್ನು ಬಿಚ್ಚಿ ತೋರಿಸುವ

ಪುಟ್ಟ ಪುಸ್ತಕಗಳು

೧. ವೇದಾಂತಬಾಲಬೋಧೆ— ಇದು ಶ್ರೀಶಂಕರಾಚಾರ್ಯರವರ ಪ್ರಾತಃಸ್ಮರಣಸ್ತೋತ್ರದ ವ್ಯಾಖ್ಯಾನರೂಪವಾದ ಪ್ರಕರಣ. ಹೊಸದಾಗಿ ವೇದಾಂತ ವಿಚಾರವನ್ನು ಪ್ರಾರಂಭಮಾಡಬೇಕೆಂಬುವರಿಗೂ ಸುಲಭವಾಗಿ ತಿಳಿಯುವಂತೆ ಪ್ರಶ್ನೋತ್ತರರೂಪದಲ್ಲಿ ಬರೆದಿರುತ್ತದೆ. ಆತ್ಮನ ನಿಜವಾದ ಸ್ವರೂಪವನ್ನೂ ಅದನ್ನು ನಾವು ಕಂಡುಕೊಳ್ಳುವ ಬಗೆಯನ್ನೂ ಸುಲಭರೀತಿಯಲ್ಲಿ ತಿಳಿಯಪಡಿಸುವದು

ಬೆಲೆ: ೦-೨-೬ 'ಅ.ಪ್ರ.'ದ ಚಂದಾದಾರರಿಗೆ: ೦-೨-೦

೧೪. ವೇದಾಂತಕಥಾವಳಿ— ಓದುವವರಿಗೆ ವಿನೋದವೂ ತತ್ತ್ವಜ್ಞಾನವೂ ಒಂದೇ ಕಾಲಕ್ಕೆ ಸಿಕ್ಕುವಂತೆ ಆರಿಸಿ ಬರೆದಿರುವ ಇಪ್ಪತ್ತೆರಡು ಕಥೆಗಳ ಗ್ರಂಥ. ಇದನ್ನು ಓದುವದರಿಂದ ವೇದಾಂತವಿಷಯದಲ್ಲಿ ಜನರಿಗಿರುವ ಎಷ್ಟೋ ತಪ್ಪು ತಿಳಿವಳಿಕೆಗಳು ಮಾಯವಾಗುವವು. ಪೂರ ತಿದ್ದಿದ ಎರಡನೆಯ ಮುದ್ರಣ.

ಬೆಲೆ: ೦-೫-೦ 'ಅ.ಪ್ರ.'ದ ಚಂದಾದಾರರಿಗೆ: ೦-೪-೦

೧೫. ಶಂಕರಮಹಾಮನನ— ಈ ಪುಸ್ತಕದಲ್ಲಿ ವೇದಾಂತಪ್ರಕ್ರಿಯೆಯ ಗುಟ್ಟನ್ನೆಲ್ಲ ಶ್ರೀಶಂಕರಭಗವತ್ಪಾದರ ಅಮೃತವಾಣಿಯ ಆಧಾರದಿಂದಲೇ ಹೊರಗೆಡಹಿರುತ್ತದೆ. ಹೊಸದಾಗಿ ಓದುವವರಿಗೆ ವೇದಾಂತದ ಒಟ್ಟು ಉಪದೇಶವನ್ನೂ ಮೊದಲೇ ಓದಿರುವವರಿಗೆ ಅನುಸಂಧಾನಕ್ಕೆ ತಕ್ಕ ಸಂಗ್ರಹವನ್ನೂ ಒದಗಿಸುವದು.

ಬೆಲೆ: ೦-೨-೬ 'ಅ.ಪ್ರ.'ದ ಚಂದಾದಾರರಿಗೆ: ೦-೨-೦

೧೬. ವಿಲಕ್ಷಣಮೌನಿ– ದಶೋಪನಿಷತ್ತುಗಳ ಮಹಾತಾತ್ಪರ್ಯವನ್ನು ವಿವರಿಸುವ ಒಂದು ಸಂಭಾಷಣೆ.

ಬೆಲೆ: ೦-೧-೬ 'ಅ. ಪ್ರ.' ದ ಚಂದಾದಾರರಿಗೆ : ೦-೧-೩

೧೭. ವೇದಾಂತಡಿಂಡಿಮ— ಶ್ರೀನೃಸಿಂಹಸರಸ್ವತೀಸ್ವಾಮಿಗಳವರು ಬರೆದದ್ದು. ಇದರಲ್ಲಿ ೯೪ ಶ್ಲೋಕಗಳಿವೆ. ನಾನಾರೂಪಗಳಾಗಿ ತೋರಿಕೊಳ್ಳುವ ಜಗತ್ತು ನಿಜವಾಗಿ ಸಚ್ಚಿದಾನಂದರೂಪವಾದ ಬ್ರಹ್ಮಕ್ಕಿಂತ ಬೇರೆಯಾಗಿಲ್ಲವೆಂಬುದನ್ನೂ ಆ ಬ್ರಹ್ಮವೇ ನಮ್ಮೆಲ್ಲರ ಆತ್ಮನೆಂಬುದನ್ನೂ ಯುಕ್ತ್ಯನುಭವಗಳ ಮೂಲಕ ತೋರಿಸಿಕೊಡುವ ಪುಟ್ಟ ಪ್ರಕರಣವಿದು. ವೇದಾಂತದಲ್ಲಿ ಬಳಕೆಯಾಗಿ ಬರುವ ಮುಖ್ಯಪಾರಿಭಾಷಿಕಶಬ್ದಗಳ ಅರ್ಥವನ್ನು ಇಲ್ಲಿ ತಿಳಿದುಕೊಳ್ಳಬಹುದಾಗಿದೆ. ಸಂಸ್ಕೃತಶ್ಲೋಕಗಳನ್ನೂ ಕೊಟ್ಟು ಕನ್ನಡದಲ್ಲಿ ಭಾವಾರ್ಥವನ್ನೂ ಕೊಟ್ಟಿವೆ. ಕ್ರೌನ್ ೮ಪತ್ರದ ಪುಟ ೩೪.

ಬೆಲೆ: ೦-೪-೦ 'ಅ.ಪ್ರ'.ದ ಚಂದಾದಾರರಿಗೆ: ೦-೩-೬

ಅಧ್ಯಾತ್ಮಪ್ರಕಾಶಕಾರ್ಯಾಲಯ, ಬೆಂಗಳೂರು ಸಿಟಿ.

ವೇದಾಂತದ ಕೆಚ್ಚನ್ನು ಬಿಚ್ಚಿ ತೋರಿಸುವ

ಪುಟ್ಟ ಪುಸ್ತಕಗಳು

೧೮. ವಿಶ್ವಧರ್ಮಸಮ್ಮೇಳನದಲ್ಲಿ ಉಪನ್ಯಾಸಗಳು— ಶ್ರೀವಿವೇಕಾನಂದಸ್ವಾಮಿಗಳವರು ಮಾಡಿದ್ದು. ಈ ಪುಸ್ತಕದಲ್ಲಿ ಸ್ವಾಗತಕ್ಕೆ ಉತ್ತರ, ನಮ್ಮಲ್ಲಿ ಮತಭೇದವಿರುವದೇಕೆ?, ಹಿಂದೂಧರ್ಮ, ಧರ್ಮವು ಹಿಂದದ ಅತ್ಯಾವಶ್ಯಕವಿಲ್ಲ, ಬೌದ್ಧಮತವು ಹಿಂದೂಮತಕ್ಕೆ ಪರಿಪೂರ್ಣತೆಯನ್ನು ಕೊಟ್ಟದ್ದು, ಉಪಸಂಹಾರ ಸಭೆಯ ಭಾಷಣೆ- ಇಷ್ಟು ಉಪನ್ಯಾಸಗಳಿವೆ

ಬೆಲೆ ೦-೫-೦ 'ಅ.ಪ್ರ.'ದ ಚಂದಾದಾರರಿಗೆ: ೦-೪-೬

೧೯. ಶ್ರೀರಾಮಹೃದಯ— ಸೀತಾದೇವಿಯೂ ಶ್ರೀರಾಮನೂ ಹನುಮಂತನಿಗೆ ಮಾಡಿದ ಗುಟ್ಟಾದ ಉಪದೇಶವಿದು. ಮೂಲ, ಅರ್ಥ, ಸಾರಾಂಶ—ಇಷ್ಟೂ ಇವೆ.

ಬೆಲೆ: ೦-೧-೦ 'ಅ.ಪ್ರ.'ದ ಚಂದಾದಾರರಿಗೆ: ೦-೦-೯

೨೦. ಶ್ರೀಲಕ್ಷ್ಮೀನರಸಿಂಹಪಂಚರತ್ನ ಮತ್ತು ಧನ್ಯಾಷ್ಟಕ— ಶ್ರೀಶಂಕರಾಚಾರ್ಯಕೃತಿಯೆಂದು ಪ್ರಸಿದ್ಧವಾಗಿರುವ ಈ ಸಣ್ಣ ಪ್ರಕರಣಗಳಿಗೆ ಭಾವಾರ್ಥ ವಿವರಣೆಗಳನ್ನು ಸೇರಿಸಿ ಪ್ರಕಟಿಸಿರುತ್ತದೆ. ಪರಮಾತ್ಮನ ಭಕ್ತಿಯನ್ನೂ ಅಧ್ಯಾತ್ಮಸಾಧನ ಕ್ರಮವನ್ನೂ ಇವುಗಳಲ್ಲಿ ಕೊಂಡಾಡಿರುತ್ತದೆ.

ಬೆಲೆ: ೦-೩-೦ 'ಅ.ಪ್ರ.'ದ ಚಂದಾದಾರರಿಗೆ: ೦-೨-೬

೨೧. ಗಣೇಶಾಷ್ಟಕ— "ಬ್ರಹ್ಮೈವೇದಂ ವಿಶ್ವಮ್" (ಈ ಪ್ರಪಂಚವೆಲ್ಲವೂ ಬ್ರಹ್ಮವೇ) ಎಂಬ ಉಪನಿಷತ್ಸಿದ್ಧಾಂತವನ್ನು ಮನೋಹರವಾದ ರೀತಿಯಿಂದ ವಿವರಿಸುವದು. ಗಣೇಶಪುರಾಣದಿಂದ ಆರಿಸಿದ ಈ ಪ್ರಕರಣಕ್ಕೆ ತಿಳಿಗನ್ನಡದ ಭಾವಾರ್ಥವಿವರಣೆಗಳನ್ನೂ ಜೋಡಿಸಿದೆ.

ಬೆಲೆ: ೦-೩-೦ 'ಅ.ಪ್ರ.'ದ ಚಂದಾದಾರರಿಗೆ: ೦-೨-೬

೨೨. ಸರ್ವೇಷ್ಟಸಿದ್ಧಿ— ನೀತಿಪ್ರಧಾನವಾದ ಗ್ರಂಥ. ಸರಳಶೈಲಿಯಲ್ಲಿದೆ.

ಬೆಲೆ: ೦-೪-೦ 'ಅ.ಪ್ರ.'ದ ಚಂದಾದಾರರಿಗೆ: ೦-೩-೬

೨೩. ಸಮುದ್ರಮಥನ— ಈ ಆಖ್ಯಾನವನ್ನು ಮಹಾಭಾರತ, ವಿಷ್ಣುಪುರಾಣ, ಭಾಗವತ— ಮುಂತಾದ ಸುಪ್ರಸಿದ್ಧಗ್ರಂಥಗಳ ಬೆಂಬಲದಿಂದ ಕಾದಂಬರಿಯ ಫಕ್ಕಿಯಲ್ಲಿ ಬರೆದಿರುತ್ತದೆ. ಸಮಯಬಿದ್ದ ಹಾಗೆ ನೀತಿಯನ್ನು ಬೋಧಿಸುವ ವಿಚಾರಗಳಿಂದಲೂ ಅಧ್ಯಾತ್ಮದ ಗುಟ್ಟನ್ನೆಲ್ಲ ರಟ್ಟುಮಾಡುವ ವಿವರಣೆಗಳಿಂದಲೂ ತುಂಬಿರುವದರಿಂದ ಓದುವವರ ಮನಸ್ಸಿಗೆ ವಿನೋದವನ್ನುಂಟುಮಾಡುವದರ ಜೊತೆಗೆ ಉತ್ತಮವಾದ ತಿಳಿವಳಿಕೆಯನ್ನೂ ಹೇರಳವಾಗಿ ಒದಗಿಸುವದು.

ಬೆಲೆ: ೦-೪-೬ 'ಅ.ಪ್ರ.'ದ ಚಂದಾದಾರರಿಗೆ: ೦-೪-೦

ಅಧ್ಯಾತ್ಮಪ್ರಕಾಶಕಾರ್ಯಾಲಯ, ಬೆಂಗಳೂರು ಸಿಟಿ.

೨೪. ತತ್ತ್ವಸಮಾಸ

ಕಪಿಲಮಹರ್ಷಿಗಳು ಬರೆದಿರುವ ಸೂತ್ರಗಳು ಮತ್ತು ಅವುಗಳ ಮೇಲೆ ಬರೆದಿರುವ ವಿವರಣೆಗಳು- ಇವುಗಳಿಂದ ಕೂಡಿದ ಪುಟ್ಟ ಪುಸ್ತಕ. ಸಾಂಖ್ಯದರ್ಶನದ ಮಾತುಗಳನ್ನೇ ವೇದಾಂತದಲ್ಲಿಯೂ ಬಳಸುತ್ತಿದ್ದಾರೆಂದು ತೋರಿಸುವ ಈ ಗ್ರಂಥವು ವೇದಾಂತವಿಚಾರಕರಿಗೆ ಬಹಳ ಪ್ರಯೋಜನಕರವಾಗುವದು ಸಾಂಖ್ಯಸಿದ್ಧಾಂತಕ್ಕೂ ವೇದಾಂತಸಿದ್ಧಾಂತಕ್ಕೂ ಇರುವ ತಾರತಮ್ಯವನ್ನು ತಿಳಿಸುವ ಒಂದು ಪರಿಶಿಷ್ಟವನ್ನೂ ಇದಕ್ಕೆ ಸೇರಿಸಿದೆ

ಬೆಲೆ: ೦-೪-೦ 'ಅ.ಪ್ರ.'ದ ಚಂದಾದಾರರಿಗೆ: ೦-೩-೬

ದೇವನಾಗರಿಯಲ್ಲಿ ವೇದಾಂತಗ್ರಂಥಗಳು

೨೫. ಶಂಕರಹೃದಯ— ಇದು ಬಲ್ಲವರ ನುಡಿ, ಬಲವಾದ ಯುಕ್ತಿ,ಭದ್ರವಾದ ಸರ್ವಾನುಭವ- ಇವುಗಳ ತಳಹದಿಯ ಮೇಲೆ ನಿಂತಿರುವ ಹೊಸ ಸ್ವತಂತ್ರಸಂಸ್ಕೃತವೇದಾಂತಗ್ರಂಥ. ಅಭಿಮಾನಪೂರ್ವಕವಾಗಿ ಸಾಕಿಕೊಂಡಿರುವ ಅಂದಶ್ರದ್ಧೆಯ ವಾದಗಳು ಈ ಗ್ರಂಥವನ್ನು ಓದುವದರಿಂದ ಮಾಯವಾಗುವವು ; ಒಣತರ್ಕದ ಕಟ್ಟು ಸಡಿಲವಾಗುವವು ; ಬ್ರಹ್ಮಾತ್ಮೈಕ್ಯವನ್ನು ನೇರವಾಗಿ ಅನುಭವಿಸುವದಕ್ಕೆ ವಿವೇಕವೈರಾಗ್ಯಾದಿಸಾಧನಗಳೊಡಗೂಡಿದ ವಿಚಾರವೇ ಎಲ್ಲರಿಗೂ ಸಾಕೆಂದೂ ಜಾತಿಧನಸಂಪತ್ತುಗಳ ಸಹಾಯವೇನೂ ಬೇಕಿಲ್ಲವೆಂದೂ ತಪ್ಪದೆ ಮನಗಾಣಬಹುದು.

ಬೆಲೆ: ೪-೦-೦ ಉತ್ತಮಪ್ರತಿ 'ಅ.ಪ್ರ.'ದ ಚಂದಾದಾರರಿಗೆ: ೩-೧೨-೦

ಬೆಲೆ: ೨-೮-೦ ಸಾದಾಪ್ರತಿ 'ಅ.ಪ್ರ.'ದ ಚಂದಾದಾರರಿಗೆ: ೨-೬-೦

೨೬. ಈಶಾವಾಸ್ಯೋಪನಿಷತ್ತು(ಸಂಸ್ಕೃತದಲ್ಲಿ)— ಉಪನಿಷತ್ತಿನ ಮೂಲ, ಅನ್ವಯ, ಶಾಂಕರಭಾಷ್ಯ, ಲಘುಟಿಪ್ಪಣಿ. ಉಪನಿಷತ್ತಿನ ಮಾಧ್ಯಂದಿನಪಾಠ. ಸಾರ, ಪರಿಶಿಷ್ಟ, ಮಂತ್ರಗಳ ವರ್ಣಾನುಕ್ರಮಣಿಕೆ, ಭಾಷ್ಯದ ಮುಖ್ಯಶಬ್ದಗಳ ಸೂಚಿ, ಪ್ರಮಾಣಗ್ರಂಥಗಳ ಅನುಕ್ರಮಣಿಕೆ- ಹೀಗೆ ವಿಂಗಡಿಸಿಕೊಂಡು ಬರೆದಿದೆ.

ಬೆಲೆ : ೦-೬-೦ 'ಅ.ಪ್ರ.'ದ ಚಂದಾದಾರರಿಗೆ : ೦-೫-೬

'ಅಧ್ಯಾತ್ಮಪ್ರಕಾಶ'ವು ಭಕ್ತಿಜ್ಞಾನವೈರಾಗ್ಯಾದಿಗಳ ವಿಷಯವಾದ ಬರಹಗಳಿಂದ ಕೂಡಿ ತಿಂಗಳಿಗೊಂದು ಸಲ ಹೊರಡುವ ಪತ್ರಿಕೆ.

ಚಂದ : ೨-೦-೦ ಮಾದರಿಯ ಸಂಚಿಕೆಗೆ : ೦-೪-೬

ಅಧ್ಯಾತ್ಮಪ್ರಕಾಶಕಾರ್ಯಾಲಯ, ಬೆಂಗಳೂರು ಸಿಟಿ.

ಪುರುಷಾರ್ಥಗ್ರಂಥಾವಳಿ

ಸಂಸ್ಕೃತಪುಸ್ತಕಗಳು

೧. ಸಂಸ್ಕೃತಪ್ರವೇಶ— (ಕನ್ನಡಕ್ಷರದಲ್ಲಿ) ಸಂಸ್ಕೃತ ಭಾಷೆಯನ್ನು ಇನ್ನೊಬ್ಬರ ಸಹಾಯವಿಲ್ಲದೆಯೆ ಸುಲಭವಾಗಿ ಕಲಿಯಬಹುದು. ಕನ್ನಡ ಅಕ್ಷರದಲ್ಲಿ ಸಂಸ್ಕೃತಪಾಠಗಳೂ ಅವುಗಳ ಅರ್ಥಗಳೂ ಇವೆ. ಕೊನೆಯಲ್ಲಿ ಶಬ್ದಕೋಶವಿದೆ. ಮೊದಲಿನಲ್ಲಿ ದಪ್ಪ ದೇವನಾಗರಿಯಕ್ಷರದಲ್ಲಿಯೇ ಸಂಸ್ಕೃತವರ್ಣಮಾಲೆ ಇದೆ, ಸ್ವತಂತ್ರವಿದ್ಯಾರ್ಥಿಗಳಿಗೂ ಉಪಯೋಗವಾಗುವ ಅನೇಕ ಸೂಚನೆಗಳಿವೆ.

ಬೆಲೆ: ೦–೨–೬ ‘ಅ.ಪ್ರ.’ದ ಚಂದಾದಾರರಿಗೆ: ೦–೨–೩

೨. ಸಂಸ್ಕೃತಪ್ರವೇಶ— (ದೇವನಾಗರಿ ಅಕ್ಷರದಲ್ಲಿ) ದೇವನಾಗರಿಯ ವರ್ಣಗಳೂ, ಕಾಗುಣಿತ, ಸಂಯುಕ್ತಾಕ್ಷರ– ಇವುಗಳನ್ನು ಸಂಸ್ಕೃತ ಪಾಠಗಳ ಜೊತೆಯಲ್ಲಿಯೇ ಸುಲಭವಾದ ರೀತಿಯಿಂದ ಕಲಿತುಕೊಳ್ಳುವಂತೆ ಹೊಸ ಮಾದರಿಯಲ್ಲಿ ಬರೆದಿರುವ ಸಂಸ್ಕೃತಬಾಲಬೋಧೆ. ಬಳಕೆಗೆ ಬೇಕಾಗುವ ಅನೇಕ ಸಾಮಾನ್ಯಶಬ್ದಗಳೊಂದೊಡಗೂಡಿದ ಸಂಭಾಷಣೆಗಳೂ ವರ್ಣನೆಗಳೂ ಇವೆ. ಉಪಯುಕ್ತವಾದ ಸೂಚನೆಗಳಿವೆ. ದಪ್ಪನೆಯ ಅಕ್ಷರದಲ್ಲಿ ಅಂದವಾಗಿ ಅಚ್ಚಾಗಿದೆ.

ಬೆಲೆ: ೦–೪–೦ ‘ಅ.ಪ್ರ.’ದ ಚಂದಾದಾರರಿಗೆ: ೦–೩–೯

೩. ರಘುವಂಶ ೧ನೆಯ ಸರ್ಗ—ಸಂಸ್ಕೃತಶ್ಲೋಕ, ಅನ್ವಯಾನುಸಾರ ಅರ್ಥ, ತಾತ್ಪರ್ಯ, ವಿಗ್ರಹವಾಕ್ಯ, ವ್ಯಾಕರಣವಿಶೇಷ, ವಿಶೇಷವಿಚಾರ, ವಿಶೇಷ ಶಬ್ದಗಳು, ಕ್ರಿಯಾರೂಪಗಳು, ಕಥಾಸಂದರ್ಭದ ಸಾರಾಂಶ, ಛಂದಸ್ಸು ಮುಂತಾದವುಗಳ ವಿಚಾರ, ಕಾಳಿದಾಸನ ವಿಷಯದ ಪೀಠಿಕೆ, ಪರೀಕ್ಷೆಯ ಪ್ರಶ್ನೆಗಳು—ಇಷ್ಟು ವಿಷಯಗಳಿವೆ.

ಬೆಲೆ: ೦–೬–೦ ಸಾದಾಕಾಗದ ‘ಅ.ಪ್ರ.’ದ ಚಂದಾದಾರರಿಗೆ: ೦–೫–೯

ಬೆಲೆ: ೦–೮–೦ ಉತ್ತಮಕಾಗದ ‘ಅ.ಪ್ರ.’ದ ಚಂದಾದಾರರಿಗೆ: ೦–೭–೯

೪. ರಘುವಂಶ ೧೦ನೆಯ ಸರ್ಗ— ಒಂದನೆಯ ಸರ್ಗದಂತೆಯೆ

ಬೆಲೆ: ೦–೧೦–೦ ‘ಅ.ಪ್ರ.’ದ ಚಂದಾದಾರರಿಗೆ: ೦–೯–೯

‘ಅಧ್ಯಾತ್ಮಪ್ರಕಾಶ’ವು ಭಕ್ತಿಜ್ಞಾನವೈರಾಗ್ಯಾದಿಗಳ ವಿಷಯವಾದ ಬರಹಗಳಿಂದ ಕೂಡಿ ತಿಂಗಳಿಗೊಂದು ಸಲ ಹೊರಡುವ ಪತ್ರಿಕೆ.

ಚಂದಾ: ೨–೦–೦ ಮಾದರಿಯ ಸಂಚಿಕೆಗೆ: ೦–೪–೬

ಅಧ್ಯಾತ್ಮಪ್ರಕಾಶಕಾರ್ಯಾಲಯ, ಬೆಂಗಳೂರು ಸಿಟಿ.

ಕಥೆ, ಸ್ತೋತ್ರ, ವ್ರತ

೫. **ರಹಸ್ಯೋಪದೇಶ** ೧.— ರಸವತ್ತಾದ ಕಥೆಯ ದೃಷ್ಟಾಂತದಿಂದ ದೇಹಾಭಿಮಾನದ ದುಷ್ಪರಿಣಾಮವನ್ನು ಬಣ್ಣಿಸಿರುವ ನೀತಿಪ್ರಧಾನವಾದ ಪುಟ್ಟ ಪುಸ್ತಕ.

ಬೆಲೆ: ೦-೧-೦ 'ಅ.ಪ್ರ.'ದ ಚಂದಾದಾರರಿಗೆ: ೦-೦-೯

೬. **ಮಾರ್ಜಿಯಾನಳ ಚಾತುರ್ಯ**—ಹುಡುಗರಿಗೊಂದು ಹೊಸ ಕಥೆ.

ಬೆಲೆ: ೦-೨-೦ 'ಅ.ಪ್ರ.'ದ ಚಂದಾದಾರರಿಗೆ: ೦-೧-೬

೭. **ಭೀಷ್ಮಚರಿತ್ರೆ**— ಹುಡುಗರಿಗಾಗಿಯೇ ಸುಲಭಭಾಷೆಯಲ್ಲಿ ಬರೆಸಿದೆ,

ಬೆಲೆ: ೦-೨-೬ 'ಅ.ಪ್ರ.'ದ ಚಂದಾದಾರರಿಗೆ: ೦-೨-೦

೮. **ಸೋಮವಾರ, ಮಂಗಳವಾರದ ಕಥೆಗಳು**— ಹೆಣ್ಣು ಮಕ್ಕಳಿಗೆ ಉಪಯೋಗ. ವ್ರತಚೂಡಾಮಣಿಯನ್ನು ನೋಡಿ ಬೇಕೆನಿಸುವ ಕಡೆ ತಿದ್ದಿದೆ

ಬೆಲೆ: ೦-೨-೦ 'ಅ.ಪ್ರ.'ದ ಚಂದಾದಾರರಿಗೆ: ೦-೧-೯

೯. **ಮಹಾಶಿವರಾತ್ರೀವ್ರತ**—ಸುಪ್ರಸಿದ್ಧವಾದ ಈ ವ್ರತಕ್ಕೆ ಬೇಕಾಗುವ ಪೂಜಾಕ್ರಮ, ಕಥೆ- ಮುಂತಾದ ಎಲ್ಲಾ ವಿಷಯಗಳನ್ನೂ ವಿವರವಾಗಿ ಕೊಟ್ಟಿದೆ.

ಬೆಲೆ: ೦-೩-೦ 'ಅ.ಪ್ರ.'ದ ಚಂದಾದಾರರಿಗೆ: ೦-೨-೬

೧೦. **ವಿಷ್ಣುಸಹಸ್ರನಾಮಸ್ತೋತ್ರ**— (ನಾಮಾವಲಿಸಹಿತ) ಶುದ್ಧ ಪಾಠ. ಭಾರತದಲ್ಲಿರುವ ಪಾಠಕ್ಕೆ ಹೋಲಿಸಿ ಭಾಷ್ಯಾನುಸಾರವಾಗಿ ತಿದ್ದಿ ಪ್ರಕಟಿಸಿದೆ.

ಬೆಲೆ: ಸಾದಾಪ್ರತಿಗೆ ೦-೨-೦ 'ಅ.ಪ್ರ.'ದ ಚಂದಾದಾರರಿಗೆ: ೦-೧-೬

ಬೆಲೆ: ಉತ್ತಮಪ್ರತಿಗೆ ೦-೩-೦ 'ಅ.ಪ್ರ.'ದ ಚಂದಾದಾರರಿಗೆ: ೦-೨-೬

೧೧. **ಶಿವಕವಚ, ಇಂದ್ರಾಕ್ಷಿ**— ಶಿವಕವಚವನ್ನು ಬ್ರಹ್ಮೋತ್ತರಖಂಡದಲ್ಲಿರುವ ಮೂಲಪಾಠಕ್ಕೆ ಹೋಲಿಸಿ ಪ್ರಚಾರದಲ್ಲಿರುವ ಪಾಠಾಂತರಗಳನ್ನೂ ಸೇರಿಸಿದೆ. ಇಂದ್ರಾಕ್ಷೀಸ್ತೋತ್ರವನ್ನು ಪ್ರಚಾರದಲ್ಲಿರುವ ಪಾಠಗಳಿಗೆ ಹೋಲಿಸಿ ತಿದ್ದಿದೆ.

ಬೆಲೆ: ೦-೧-೬ 'ಅ.ಪ್ರ.'ದ ಚಂದಾದಾರರಿಗೆ: ೦-೧-೩

'ಅಧ್ಯಾತ್ಮಪ್ರಕಾಶ'ವು ಭಕ್ತಿಜ್ಞಾನವೈರಾಗ್ಯಾದಿಗಳ ವಿಷಯವಾದ ಬರಹಗಳಿಂದ ಕೂಡಿ ತಿಂಗಳಿಗೊಂದು ಸಲ ಹೊರಡುವ ಪತ್ರಿಕೆ.

ಚಂದಾ: ೨-೦-೦ ಮಾದರಿಯ ಸಂಚಿಕೆಗೆ: ೦-೪-೬

ಗ್ರಂಥಗಳಿಗೆಲ್ಲ ಅಂಚೆಯ ವೆಚ್ಚ ಬೇರೆ ಬೀಳುತ್ತದೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ,

೬೫, ಎರಡನೆಯ ಬೀದಿ, ಚಾಮರಾಜಪೇಟೆ, **ಬೆಂಗಳೂರು ಸಿಟಿ.**

೧೨೫-೪೩ ಅಧ್ಯಾತ್ಮಪ್ರಕಾಶಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು ಸಿಟಿ.